

# सरयू ಸರಯೂ

ವಿದ್ಯಾಕೇಂದ್ರ ವಾರ್ತಾಪತ್ರ

**SARAYU** - Kannada Monthly  Regn. No. KARKAN/2014/62363
**Septemper Vol. : 12  Issue : 4**  5127/ ವಿಶ್ವಾವಸು ಸಂವತ್ಸರ ಸಪ್ಟೆಂಬರ್ 2025 ಪುಟ 8 **Rs. 10/-**

Postal Regn No. PTR/136/2025-27
Licensed to Post without pre-payment
License No: SK/WPP/PTR/117/2025-27

## ಶ್ರೀರಾಮ ಪ್ರಥಮದರ್ಜೆ ಮಹಾವಿದ್ಯಾಲಯ-ಆಗತ ಸ್ವಾಗತ

13.8.2025






ಪ್ರಥಮ ಪದವಿ ತರಗತಿಗಳಿಗೆ ದಾಖಲಾದ ವಿದ್ಯಾರ್ಥಿಗಳನ್ನು ಸ್ವಾಗತಿಸುವ ಆಗತ ಸ್ವಾಗತ ಕಾರ್ಯಕ್ರಮವು ಅಗ್ನಿಹೋತ್ರಕ್ಕೆ ಹವಿಸ್ಸನ್ನು ನೀಡುವ ಮೂಲಕ ಆರಂಭಗೊಂಡಿತು. ನೂತನ ವಿದ್ಯಾರ್ಥಿಗಳು ಅಗ್ನಿಹೋತ್ರಕ್ಕೆ ಹವಿಸ್ಸನ್ನು ಅರ್ಪಿಸಿದರು. ಹೊಸ ವಿದ್ಯಾರ್ಥಿಗಳಿಗೆ ಹಾಗೂ ಉಪನ್ಯಾಸಕರಿಗೆ ಆರತಿ ಬೆಳಗಿ, ಕುಂಕುಮ ಹಚ್ಚಿ ಸ್ವಾಗತಿಸಲಾಯಿತು. ಡಾ. ಪ್ರಭಾಕರ ಭಟ್ ದಂಪತಿಗಳು, ಮಂಗಳೂರು ವಿ.ವಿ ಕುಲಪತಿಗಳಾದ ಡಾ. ಪಿ. ಎಲ್ ಧರ್ಮ, ಭಾಜಪಾ ಕಾಸರಗೋಡು ಜಿಲ್ಲಾಧ್ಯಕ್ಷೆ ಶ್ರೀಮತಿ ಎಂ. ಎಲ್ ಅಶ್ವಿನಿ, ಜಿವಿಲ್ ಆಚಾರ್ಯ ಜುವೆಲ್ಲರ್ಸ್ ಪುತ್ತೂರು ಇದರ ಅಧ್ಯಕ್ಷರು ಶ್ರೀ ಬಲರಾಮ ಆಚಾರ್ಯ ಹಾಗೂ ಪತ್ನಿ ಶ್ರೀಮತಿ ರಾಜಿ ಬಲರಾಮ ಆಚಾರ್ಯ, ಹಾರ್ದಿಕ್ ಹರ್ಬಲ್ಸ್ ಕೆದಿಲ, ಇದರ ಸಿಇಒ ಶ್ರೀ ಮುರಳೀಧರ ಹಾಗೂ ಇದರ ಮಾಲಕಿ ಶ್ರೀಮತಿ ಮೀರಾ ಮುರಳಿ ಉಪಸ್ಥಿತರಿದ್ದು ಶುಭ ಹಾರೈಸಿದರು. ಶ್ರೀರಾಮ ವಿದ್ಯಾಕೇಂದ್ರದ ಸಂಚಾಲಕರು ಶ್ರೀ ವಸಂತ ಮಾಧವ, ಕಾಲೇಜು ಪ್ರಾಂಶುಪಾಲ ಶ್ರೀ ಕೃಷ್ಣಪ್ರಸಾದ್ ಕಾಯರ್‌ಕಟ್ಟೆ ವೇದಿಕೆಯಲ್ಲಿ ಉಪಸ್ಥಿತರಿದ್ದರು.

## ಬಾಂಧವ್ಯಗಳ ಬಂಧನ
## ವಿಂಶತಿ ವರ್ಷದ ಪೋಷಕರ ಸಭೆ

21.8.2025




"ಬಾಂಧವ್ಯಗಳ ಬಂಧನ" ಕಾರ್ಯಕ್ರಮದಲ್ಲಿ ಖ್ಯಾತ ವಾಗ್ಮಿಗಳಾದ ಶ್ರೀ ಎನ್.ಆರ್ ದಾಮೋದರ ಶರ್ಮಾ ಮಕ್ಕಳ ಹಾಗೂ ಪೋಷಕರ ನಡುವಿನ ಭಾಂದವ್ಯದ ಬಗ್ಗೆ ಮಾತನಾಡಿ, ನಾವೆಲ್ಲರೂ ಮೊದಲಾಗಿ ಭಾರತೀಯ ಪರಂಪರೆಯನ್ನು ನಮ್ಮಲ್ಲಿ ಮೈಗೂಡಿಸಿಕೊಳ್ಳಬೇಕು, ಬದುಕಿನಲ್ಲಿ ಆತ್ಮ ವಿಶ್ವಾಸದ ಜೊತೆಗೆ ಬದುಕಿನಲ್ಲಿ ಸಂಸ್ಕಾರವನ್ನು ಬೆಳೆಸಿಕೊಳ್ಳಬೇಕು, ನಮ್ಮ ಬದುಕು ಎಂಬುವುದು ನಮ್ಮ ಪರಂಪರೆ, ಭಾರತದಲ್ಲಿ ಹುಟ್ಟಿರುವ ಸಾರ್ಥಕತೆಯ ಮನೋಭಾವನೆ ನಮ್ಮಲ್ಲಿರಬೇಕು ಎಂದರು. ವೇದಿಕೆಯಲ್ಲಿ ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾದ ಡಾ। ಪ್ರಭಾಕರ ಭಟ್ ಕಲ್ಲಡ್ಕ, ವಿದ್ಯಾಕೇಂದ್ರದ ಅಧ್ಯಕ್ಷರಾದ ಶ್ರೀ ಬಿ. ನಾರಾಯಣ ಸೋಮಯಾಜಿ, ಸಂಚಾಲಕರಾದ ಶ್ರೀ ವಸಂತ ಮಾಧವ, ಪ.ಪೂರ್ವ ವಿದ್ಯಾಲಯದ ಪ್ರಾಚಾರ್ಯರಾದ ಶ್ರೀ ವಸಂತ ಬಲ್ಲಾಳ್ ಉಪಸ್ಥಿತರಿದ್ದರು.



ಶಿಶುಮಂದಿರ ಮತ್ತು ಪ್ರಾಥಮಿಕ ಶಾಲಾ ಪುಟಾಣಿಗಳು ಕೃಷ್ಣ-ರಾಧೆಯರ ವೇಷ ಧರಿಸಿ ಕಲ್ಲಡ್ಕ ಶ್ರೀರಾಮ ಮಂದಿರದ ಮೊಸರು ಕುಡಿಕೆ ಉತ್ಸವದಲ್ಲಿ ಭಾಗವಹಿಸಿದರು

ಬಾಲ ಕೃಷ್ಣನನ್ನು ತೊಟ್ಟಿಲಿಗೆ ಹಾಕುವ ಕಾರ್ಯಕ್ರಮ (16.8.25)

ಕೃಷ್ಣ-ರಾಧೆಯರು ಮೊಸರು ಕುಡಿಕೆ ಒಡೆಯುವುದು

ಶ್ರೀರಾಮ ಮಂದಿರದ 50ನೇ ವರ್ಷದ ಗಣೇಶ ಚತುರ್ಥಿಯ(28.8.25) ಪ್ರಯುಕ್ತ ನಡೆದ ಶೋಭಾಯಾತ್ರೆಯಲ್ಲಿ ಶ್ರೀರಾಮ ವಿದ್ಯಾಕೇಂದ್ರದ 108 ತಂಡ ಸುಮಾರು 1700ಕ್ಕೂ ಅಧಿಕ ವಿದ್ಯಾರ್ಥಿಗಳು ಕುಣಿತ ಭಜನೆಯಲ್ಲಿ ಪಾಲ್ಗೊಂಡರು.

# ವಿವಿಧೆಡೆಗಳಲ್ಲಿ ರಕ್ಷಾಬಂಧನ – ಸಂಸ್ಕೃತೋತ್ಸವ



ಶಿಶುಮಂದಿರದಲ್ಲಿ ರಕ್ಷಾಬಂಧನ




ಪವರ್ ಮ್ಯಾನ್‌ಗಳೊಂದಿಗೆ ರಕ್ಷಾಬಂಧನ




ಪಂಚಾಯತ್ ಸದಸ್ಯರೊಂದಿಗೆ ರಕ್ಷಾಬಂಧನ




ಇಂಗ್ಲೀಷ್ ಮೀಡಿಯಂ ಶಾಲೆಯಲ್ಲಿ ರಕ್ಷಾಬಂಧನ




ಹಿರಿಯ ವಿದ್ಯಾರ್ಥಿಗಳೊಂದಿಗೆ ರಕ್ಷಾಬಂಧನ




ಗ್ರಾಮ ಪಂ. ಸಿಬ್ಬಂದಿಯವರೊಂದಿಗೆ ರಕ್ಷಾಬಂಧನ










ಸಂಸ್ಕೃತ ಸಪ್ತಾಹ–ಸಂಸ್ಕೃತೋತ್ಸವದ ನಿಮಿತ್ತ ವಿವಿಧ ವಿಭಾಗಗಳಲ್ಲಿ ವಿವಿಧ ರೀತಿಯ ಕಾರ್ಯಕ್ರಮಗಳು ಪ್ರಾಥಮಿಕ ಶಾಲೆ ಮತ್ತು ಪ್ರೌಢಶಾಲೆಯಲ್ಲಿ ಧಾನ್ಯಗಳು, ತರಕಾರಿ, ಹಣ್ಣುಗಳು, ನಿತ್ಯ ಉಪಯೋಗಿ ವಸ್ತುಗಳನ್ನು ಸಂಸ್ಕೃತದಲ್ಲಿ ಪರಿಚಯಿಸಲಾಯಿತು. ಪ್ರೌಢಶಾಲಾ ಸಂಸ್ಕೃತೋತ್ಸವದಲ್ಲಿ ಸಂಸ್ಕೃತ ನಾಟಕ, ಸಂಸ್ಕೃತ ನೃತ್ಯಗಳ ಪ್ರದರ್ಶನ ಮಾಡಲಾಯಿತು.

ಶ್ರೀರಾಮ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಸಂಸ್ಕೃತ ಸಪ್ತಾಹದ ಪ್ರಯುಕ್ತ ಸಂಸ್ಕೃತ ಗ್ರಂಥ ಪ್ರದರ್ಶಿನಿ (11.08.2025) ಶ್ರೀರಾಮ ವಿದ್ಯಾಕೇಂದ್ರದ ಸಂಸ್ಥಾಪಕರಾದ ಡಾ॥ ಪ್ರಭಾಕರ್‌ಭಟ್ ಕಲ್ಲಡ್ಕ ಇವರು ದೀಪ ಪ್ರಜ್ವಲನೆಯ ಮೂಲಕ ಚಾಲನೆ ನೀಡಿದರು. ಗ್ರಂಥಾಲಯದಲ್ಲಿರುವ ಸಂಸ್ಕೃತ ಗ್ರಂಥಗಳ ವೀಕ್ಷಣೆಯನ್ನು ಮಾಡಿದರು. ಈ ಕಾರ್ಯಕ್ರಮದಲ್ಲಿ ಸಂಚಾಲಕರಾದ ಶ್ರೀ ವಸಂತ ಮಾಧವ, ವಿದ್ಯಾಕೇಂದ್ರದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಕೃಷ್ಣಪ್ರಸಾದ್ ಕಾಯರ್‌ಕಟ್ಟೆ, ಆಡಳಿತ ಮಂಡಳಿ ಸದಸ್ಯರಾದ ಶ್ರೀ ಸುಜಿತ್ ಕೊಟ್ಟಾರಿ, ಪ್ರಾಂಶುಪಾಲರಾದ ಶ್ರೀ ತಿರುಮಲೇಶ್ವರ ಪ್ರಶಾಂತ್, ಹಾಗೂ ಎಲ್ಲಾ ವಿಭಾಗದ ಸಂಸ್ಕೃತ ಶಿಕ್ಷಕರು ಉಪಸ್ಥಿತರಿದ್ದರು.






**ವರಮಹಾಲಕ್ಷ್ಮೀ ಪೂಜೆ 8.8.2025:** ಶ್ರೀರಾಮ ಶಿಶುಮಂದಿರದ ವತಿಯಿಂದ ಸುಧೆಕ್ಕಾರ್ ರಕ್ತೇಶ್ವರಿ ದೈವಸ್ಥಾನದ ವಠಾರದಲ್ಲಿ ಸಾಮೂಹಿಕ ಶ್ರೀ ವರಮಹಾಲಕ್ಷ್ಮೀ ಪೂಜೆ ಮತ್ತು ರಕ್ಷಾಬಂಧನ ಕಾರ್ಯಕ್ರಮದಲ್ಲಿ ಬಿಸಿರೋಡಿನ ವಕೀಲರಾದ ಶ್ರೀಮತಿ ಉಷಾ ಗೋಪಾಲ್, ಶ್ರೀಮತಿ ಸುಗುಣ ಶೆಟ್ಟಿ ಉಪಸ್ಥಿತರಿದ್ದರು. ಪ್ರೀತಾ ಮಾತಾಜಿ ಕಾರ್ಯಕ್ರಮ ಮಹತ್ವವನ್ನು ತಿಳಿಸಿದರು. ಸರಸ್ವತಿ ಶಿಶುಮಂದಿರ ಕೊಪ್ಪಲಕೋಡಿ ವತಿಯಿಂದ ಶ್ರೀ ರಾಮಾಂಜನೇಯ ವ್ಯಾಯಾಮ ಶಾಲೆ ಶಂಭೂರು ಇಲ್ಲಿ ನಡೆದ ಕಾರ್ಯಕ್ರಮದಲ್ಲಿ ಶ್ರೀ ಕಮಲಾಕ್ಷ ಇವರು ದಿನದ ಮಹತ್ವ ತಿಳಿಸಿದರು.



ಅಕ್ಕಮಹಾದೇವಿ ಶಿಶುಮಂದಿರ ಅಜ್ಜಿಬೆಟ್ಟು ಇಲ್ಲಿ ಶೈಕ್ಷಣಿಕ ವರ್ಷದ ಮೊದಲ ಪಾಲಕರ ಸಭೆ (5.8.2025) ನಡೆಸಲಾಯಿತು. ಕೋಶಾಧಿಕಾರಿಯಾಗಿರುವ ಶ್ರೀ ಸತೀಶ್ ಶಿವಗಿರಿ ಇವರು ಮಾರ್ಗದರ್ಶನ ನೀಡಿದರು. ಪಾಲಕರು, ಆಡಳಿತ ಮಂಡಳಿಯ ಸದಸ್ಯರು ಉಪಸ್ಥಿತರಿದ್ದರು.




**ವಿಜ್ಞಾನ ಮಾದರಿ ಸ್ಪರ್ಧೆ 12.08.2025**

ವಿಕ್ರಂ ಸಾರಾಭಾಯಿ ಅವರ ಜನ್ಮದಿನಾಚರಣೆ ಅಂಗವಾಗಿ ಕೆನರಾ ವಿಕಾಸ್ ಕ್ಯಾಂಪಸ್‌ನಲ್ಲಿ ABVP, ಆಯೋಜಿಸಿದ ವಿಜ್ಞಾನ ಮಾದರಿ ಸ್ಪರ್ಧೆಯಲ್ಲಿ 10ನೇ ತರಗತಿಯ ವಿದ್ಯಾರ್ಥಿಗಳಾದ ಶೀತಲ್, ವರುಣ್, ಪ್ರಿತೇಶ್ ಪ್ರಥಮ ಸ್ಥಾನವನ್ನು ಪಡೆದಿರುತ್ತಾರೆ.



**ಸಂಗೀತ ಕಾರ್ಯಾಗಾರ 16.08.2025**

ವಿದ್ಯಾಭಾರತಿ ದ.ಕ. ಜಿಲ್ಲಾ ಸಂಗೀತ, ಸರಸ್ವತಿ ವಂದನ ಕಾರ್ಯಾಗಾರ ಮಧುಕರ ಸಭಾಂಗಣದಲ್ಲಿ ನಡೆಯಿತು. ವೇದಿಕೆಯಲ್ಲಿ ಡಾ। ಪ್ರಭಾಕರ ಭಟ್ ಕಲ್ಲಡ್ಕ ಹಾಗೂ ವಿದ್ಯಾಭಾರತಿ ಪ್ರಾಂತ ಸಂಗೀತ ಪ್ರಮುಖರು ಶ್ರೀಮತಿ ಸುಜಾತ ಮತ್ತು ಸಹಸಂಚಾಲಕರು ಮುಖ್ಯೋಪಾಧ್ಯಾಯರು ಉಪಸ್ಥಿತರಿದ್ದರು.



**ರಾಜ್ಯಮಟ್ಟಕ್ಕೆ ಆಯ್ಕೆ 30.8.25**

ಶ್ರೀರಾಮ ಆಂಗ್ಲ ಮಾಧ್ಯಮ ಶಾಲೆ ಕಲ್ಲಡ್ಕ ಇಲ್ಲಿ ನಡೆದ ವಿದ್ಯಾಭಾರತಿ ಜಿಲ್ಲಾಮಟ್ಟದ ಸಂಸ್ಕೃತಿ ಜ್ಞಾನ ರಸಪ್ರಶ್ನೆಯಲ್ಲಿ ಪ್ರೌಢಶಾಲೆಯ ವಿದ್ಯಾರ್ಥಿಗಳಾದ ಧಾತ್ರಿ, ಶಿವಾನಿ, ಪ್ರಜ್ಞ ಪ್ರಥಮ ಸ್ಥಾನಗಳಿಸಿ ರಾಜ್ಯಮಟ್ಟಕ್ಕೆ ಆಯ್ಕೆಯಾಗಿರುತ್ತಾರೆ.

## ಸುಭಾಷಿತ ಮಂಜರಿ

ವಿಪದೋ ನೈವ ವಿಪದಃ
ಸಂಪದೋ ನೈವ ಸಂಪದಃ ।
ವಿಪದ್ವಿಸ್ಮರಣಂ ವಿಷ್ಣೋಃ
ಸಂಪನ್ನಾರಾಯಣಸ್ಮೃತಿಃ ॥

ವಿಪತ್ತುಗಳು ವಿಪತ್ತುಗಳಲ್ಲ; ಐಶ್ವರ್ಯಗಳು ಐಶ್ವರ್ಯಗಳಲ್ಲ; ವಿಷ್ಣುವನ್ನು ಮರೆಯುವುದೇ ವಿಪತ್ತು; ಸ್ಮರಿಸಿಕೊಳ್ಳುವುದೇ ಸಂಪತ್ತು.

### ಸಂಪಾದಕೀಯ

ಆಗೋಸ್ಟ್ ತಿಂಗಳಲ್ಲಿ ಶಾರೀರಿಕ ಚಟುವಟಿಕೆಗಳು ಹಾಗೂ ಜ್ಞಾನ ವಿಜ್ಞಾನ ಮೇಳಗಳಂತಹ ಶೈಕ್ಷಣಿಕ ಮನೋಭಾವ ವೃದ್ಧಿಯ ಕಾರ್ಯಕ್ರಮಗಳು ಬಹುತೇಕ ನಡೆದಿದ್ದು, ಈ ಪೈಕಿ ರಾಜ್ಯ ಹಾಗೂ ಕ್ಷೇತ್ರೀಯ ಮಟ್ಟಕ್ಕೆ ವಿದ್ಯಾರ್ಥಿಗಳು ಆಯ್ಕೆಯಾಗಿರುವುದು ಗಮನಾರ್ಹ ಸಂಗತಿ. ಈ ಪೈಕಿ ಅನೇಕ ವಿದ್ಯಾರ್ಥಿಗಳು ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡುತ್ತಿದ್ದರೂ ಕ್ಷೇತ್ರೀಯ ಸ್ಪರ್ಧೆಗಳಿಗಾಗಿ ಇಂಗ್ಲೀಷ್, ಹಿಂದಿಯಲ್ಲಿ ಸ್ಪರ್ಧೆ ಎದುರಿಸಲು ತಯಾರಾಗಿದ್ದು, ಇದೊಂದು ಉಲ್ಲೇಖನೀಯ ಸಂಗತಿ ಆ ಎಲ್ಲಾ ವಿದ್ಯಾರ್ಥಿಗಳಿಗೆ ಅಭಿನಂದನೆಗಳು. ಉಳಿದಂತೆ ರಕ್ಷಾ ಬಂಧನ, ಸಂಸ್ಕೃತ ಸಪ್ತಾಹ ಎಲ್ಲಾ ವಿಭಾಗಗಳಲ್ಲಿ ನಡೆದಿರುವುದು ವಿಶೇಷವಾಗಿದೆ.

ಸಂಪಾದಕ ಬಳಗ


### ಸಂಪಾದಕೀಯ ಮಂಡಳಿ

**ಸಂಪಾದಕರು, ಮುದ್ರಕರು ಹಾಗೂ ಪ್ರಕಾಶಕರು :**
ನಾರಾಯಣ ಸೋಮಯಾಜಿ
ಅಧ್ಯಕ್ಷರು, ಶ್ರೀರಾಮ ವಿದ್ಯಾಕೇಂದ್ರ
**ಕಾರ್ಯನಿರ್ವಾಹಕ ಸಂಪಾದಕರು :**
ಕೃಷ್ಣಪ್ರಸಾದ ಕಾಯರ್‌ಕಟ್ಟೆ
**ಸಹಸಂಪಾದಕರು :**
ಶ್ರೀಮತಿ (ಶಿಶುಮಂದಿರ)
ಚೈತ್ರಾ (ಪ್ರಾಥಮಿಕ ಶಾಲೆ)
ನಿಕ್ಷಿತಾ (ಪ್ರೌಢಶಾಲೆ)
ದೀಪಿಕಾ (ಪಿಯುಸಿ)
ಅನನ್ಯ (ಪದವಿ)
ಉಷಾ(ಇಂಗ್ಲೀಷ್ ಮೀಡಿಯಂ ಸ್ಕೂಲ್)
**ವ್ಯವಸ್ಥಾಪಕ ಸಂಪಾದಕರು :** ಕುಶಾಲಪ್ಪ ಅಮ್ಮೂರು


**ಸಂಸ್ಕೃತ ಸಪ್ತಾಹ : 04.08.2025**

ದೀಪಪ್ರಜ್ವಲನೆಯ ಮೂಲಕ ಸಂಸ್ಕೃತ ಸಪ್ತಾಹಕ್ಕೆ ಚಾಲನೆ ನೀಡಲಾಯಿತು. ಅದರ ಅಂಗವಾಗಿ ಒಂದು ವಾರಗಳ 1ರಿಂದ 7ನೇ ವಿದ್ಯಾರ್ಥಿಗಳಿಂದ ಸಂಸ್ಕೃತ ಹಾಡು, ಕಿರು ಪ್ರಹಸನ ಹಾಗೂ ವಿವಿಧ ನೃತ್ಯ ಪ್ರದರ್ಶನಗಳು ನಡೆಯಿತು.

**ಗೋವಿಗಾಗಿ ಮೇವು : 05.08.2025**

ಪ್ರಾಥಮಿಕ ವಿಭಾಗದ ಪರಿಸರದಲ್ಲಿದ್ದ ಹಸಿ ಹುಲ್ಲನ್ನು ಕತ್ತರಿಸಿ, 7ನೇ ತರಗತಿಯ ವಿದ್ಯಾರ್ಥಿಗಳು ವಸುಧಾರಾ ಗೋಶಾಲೆಗೆ ಕೊಟ್ಟರು.

**ಅಧ್ಯಾಪಕರ ಬೈಠಕ್ : 06.08.2025**

ವಿದ್ಯಾರ್ಥಿಗಳ ಕಲಿಕಾ ಮಟ್ಟ ಪರಿಶೀಲನೆಯ ಅವಲೋಕನ ಬೈಠಕ್ ಮುಖ್ಯೋಪಾಧ್ಯಾಯರ ಮಾರ್ಗದರ್ಶನದಲ್ಲಿ ನಡೆಯಿತು. ಎಲ್ಲಾ ಅಧ್ಯಾಪಕರು ತಮ್ಮ ತರಗತಿಯ ವಿದ್ಯಾರ್ಥಿಗಳ ಕಲಿಕೆಯ ವರದಿಯನ್ನು ನೀಡಿದರು.

**ಈಜು ರಾಜ್ಯಮಟ್ಟಕ್ಕೆ ಆಯ್ಕೆ : 09.08.2025**

ವಿದ್ಯಾಭಾರತಿ ಕರ್ನಾಟಕ ದ.ಕ ಜಿಲ್ಲಾ ಮಟ್ಟದ ಈಜು ಸ್ಪರ್ಧೆಯಲ್ಲಿ 6ನೇ ತರಗತಿಯ ಅನನ್ಯ ಎ.ಆರ್ 200ಮೀ. ಬಟರ್‌ಫ್ಲೈ ಮತ್ತು 100ಮೀ. ಫ್ರೀ ಸ್ಟೈಲ್‌ನಲ್ಲಿ ಚಿನ್ನದ ಪದಕಗಳನ್ನು, 100ಮೀ ಬ್ಯಾಕ್ ಸ್ಟ್ರೋಕ್‌ನಲ್ಲಿ ಬೆಳ್ಳಿ ಪದಕ ಪಡೆದು ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

**ಪವರ್‌ಮ್ಯಾನ್‌ಗಳೊಂದಿಗೆ ರಕ್ಷಾಬಂಧನ: 9.8.25**

ಪವರ್‌ಮ್ಯಾನ್‌ಗಳಿಗೆ ಸಂಸ್ಥೆಯ ಸಂಸ್ಥಾಪಕರು ಡಾ। ಪ್ರಭಾಕರ್ ಭಟ್ ಕಲ್ಲಡ್ಕ ಶಾಲು ಹೊದಿಸಿ ಭಾರತಮಾತೆಯ ಸ್ಮರಣಿಕೆ ನೀಡಿ ಗೌರವಿಸಿದರು ನಂತರ ರಕ್ಷಾಬಂಧನದ ಮಹತ್ವ ತಿಳಿಸಿದರು.

ವೇದಿಕೆಯಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ನಿಗಮ ಮಂಡಳಿ ಕಲ್ಲಡ್ಕ ವಲಯದ ಶಾಖಾಧಿಕಾರಿಯಾದ ಶ್ರೀ ಮಹಾಬಲ ಬಿ, ಬಂಟ್ವಾಳ ವಿದ್ಯುತ್ ಗುತ್ತಿಗೆದಾರರಾದ ಶ್ರೀ ದಿವಾಕರ ಚೆಂಡೆ, ಕರ್ನಾಟಕ ವಿದ್ಯುಚ್ಛಕ್ತಿ ನಿಗಮ ಮಂಡಳಿ ಕಲ್ಲಡ್ಕ ವಲಯ ಮೆಕ್ಯಾನಿಕ-2 ಶ್ರೀ ರಾಜೇಂದ್ರ, ಪವರ್‌ಮೆನ್‌ಗಳಾದ ಶ್ರೀ ಲವ, ಶ್ರೀ ವಸಂತ, ಶ್ರೀ ಹರೀಶ, ಶ್ರೀ ಶಿವಶರಣ, ಶ್ರೀ ಸಂಜಯ, ಶ್ರೀ ಮಧುಸೂದನ, ಶ್ರೀ ಶ್ರೀನಿವಾಸ, ವಿದ್ಯಾಕೇಂದ್ರದ ಸಂಚಾಲಕರು ಹಾಗೂ ಮುಖ್ಯೋಪಾಧ್ಯಾಯರು ಉಪಸ್ಥಿತರಿದ್ದರು.

**ವಿದ್ಯುತ್ ಸುರಕ್ಷತಾ ಮಾಹಿತಿ: 09.08.2025**

ವಿದ್ಯುತ್ ಸುರಕ್ಷತೆಯ ಬಗ್ಗೆ, ಅವಗಢಗಳಿಂದ ತಪ್ಪಿಸಿಕೊಳ್ಳಲು ತೆಗೆದುಕೊಳ್ಳಬಾಕಾದ ಮುಂಜಾಗ್ರತಾ ಕ್ರಮಗಳ ಬಗ್ಗೆ ಕರ್ನಾಟಕ ವಿದ್ಯುಚ್ಛಕ್ತಿ ನಿಗಮ ಮಂಡಳಿ ಕಲ್ಲಡ್ಕ ವಲಯದ ಶಾಖಾಧಿಕಾರಿಯಾದ ಶ್ರೀ ಮಹಾಬಲ ಬಿ ಇವರು ವಿದ್ಯಾರ್ಥಿಗಳಿಗೆ ತಿಳಿಸಿಕೊಟ್ಟರು.

**ಹಿರಿಯರೊಂದಿಗೆ ಬೈಠಕ್ : 12.08.2025**

ವೇದವ್ಯಾಸ ಧ್ಯಾನಮಂದಿರದಲ್ಲಿ ನಡೆದ ಅಧ್ಯಾಪಕರ ಅನೌಪಚಾರಿಕ ಬೈಠಕ್‌ನಲ್ಲಿ ಅಧ್ಯಾಪಕರು ಶಾಲೆಯ ಬಗೆಗಿನ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು. ಈ ಸಂದರ್ಭದಲ್ಲಿ ಸಂಸ್ಥೆಯ ಸಂಸ್ಥಾಪಕರಾದ ಡಾ। ಪ್ರಭಾಕರ್ ಭಟ್ ಕಲ್ಲಡ್ಕ, ಆಡಳಿತ ಮಂಡಳಿಯ ಸದಸ್ಯರಾದ ಶ್ರೀಮತಿ ಲಕ್ಷ್ಮೀ ರಘುರಾಜ್, ಶ್ರೀಮತಿ ಮಲ್ಲಿಕಾ ಆರ್ ಶೆಟ್ಟಿ ಹಾಗೂ ಶ್ರೀ ರವಿರಾಜ್ ಕಣಂತೂರು ಉಪಸ್ಥಿತರಿದ್ದರು.

**ಅಭಿನಂದನೆ : 15.08.2025**

ವಿಜ್ಞಾನ ಮಾದರಿ ಪ್ರದರ್ಶನದಲ್ಲಿ ರಾಷ್ಟ್ರಮಟ್ಟದಲ್ಲಿ ಸಾಧನೆ ಮಾಡಿದ ಪ್ರಾಥಮಿಕ ವಿಭಾಗದ ಹಿರಿಯ ವಿದ್ಯಾರ್ಥಿಗಳ ಅಭಿನಂದನಾ ಕಾರ್ಯಕ್ರಮದಲ್ಲಿ ಜಗನ್ ಹಾಗೂ ಶಿವಾನ್ ಶೆಟ್ಟಿಗೆ ಅಧ್ಯಾಪಕ ವೃಂದದವರು, ಆರತಿ ಬೆಳಗಿ, ತಿಲಕವಿಟ್ಟು, ಸಿಹಿ ನೀಡಿದರು. ವಿದ್ಯಾಕೇಂದ್ರದ ಸಂಚಾಲಕರಾದ ಶ್ರೀ ವಸಂತಮಾಧವ ಇವರಿಗೆ ಶಾಲು ಹೊದಿಸಿ, ಸ್ಮರಣಿಕೆ ನೀಡಿ ಅಭಿನಂದಿಸಿದರು.

**ಸಂಸ್ಕೃತ ಸಪ್ತಾಹ ಸಮಾರೋಪ : 16.08.2025**

ಶ್ರೀರಾಮ ಆಂಗ್ಲ ಮಾಧ್ಯಮ ಶಾಲೆಯ ಸಂಸ್ಕೃತ ಅಧ್ಯಾಪಕರಾದ ನಿರಂಜನ ಗೋಖಲೆಯವರು ಸಂಸ್ಕೃತ ಸಪ್ತಾಹದ ಸಮಾರೋಪ ಕಾರ್ಯಕ್ರಮದಲ್ಲಿ ಭಾಗವಹಿಸಿ, ಸಂಸ್ಕೃತ ಭಾಷೆಯ ಮಹತ್ವ ತಿಳಿಸಿಕೊಟ್ಟರು.

**ಸಾಮೂಹಿಕ ಹುಟ್ಟುಹಬ್ಬ : 23.08.2025**

ಆಗಸ್ಟ್ ತಿಂಗಳಲ್ಲಿ ಹುಟ್ಟಿದ ಮಕ್ಕಳ ಹುಟ್ಟಹಬ್ಬವನ್ನು ಸಾಮೂಹಿಕವಾಗಿ ಆಚರಿಸಲಾಯಿತು. ಹುಟ್ಟುಹಬ್ಬ ಆಚರಿಸುವ ಮಕ್ಕಳಿಗೆ ಅಧ್ಯಾಪಕವೃಂದದವರು ಆರತಿ ಅಕ್ಷತೆ ತಿಲಕಧಾರಣೆ ಮಾಡಿ ಸಿಹಿ ನೀಡಿದರು. ಮಕ್ಕಳು ಭಾರತಮಾತೆಗೆ ಪುಷ್ಪಾರ್ಚನೆ ಮಾಡಿ ಹಿರಿಯ-ರಿಂದ ಆಶೀರ್ವಾದ ಪಡೆದುಕೊಂಡರು. ದಿನದ ಮಹತ್ವವನ್ನು ಸಹಮುಖ್ಯೋಪಾಧ್ಯಾಯರಾದ ಶ್ರೀ ಸುಮಂತ್ ಆಳ್ವ ಎಂ ತಿಳಿಸಿಕೊಟ್ಟರು.

**ತಾಲೂಕು ಮಟ್ಟದ ಚಿತ್ರಕಲೆ ಪ್ರಥಮ : 24.8.25**



ಬಂಟ್ವಾಳ ತಾಲೂಕು ಮಟ್ಟದ ಸೂಕ್ತ ನ್ಯೂಸ್ ಅವರ ಗಣೇಶ ಚತುರ್ಥಿ ಪ್ರಯುಕ್ತ ನಡೆದ ಚಿತ್ರಕಲಾ ಸ್ಪರ್ಧೆಯಲ್ಲಿ 5ನೇ ತರಗತಿಯ ನಿಹಾರಿಕ ಎಂ. ಪ್ರಥಮ ಸ್ಥಾನ.

**ಮಾಹಿತಿ ಕಾರ್ಯಾಗಾರ : 25.8.25**

ವಿದ್ಯಾರ್ಥಿ ಕ್ಷೇಮ ಪಾಲನ ಸಮಿತಿ ವತಿಯಿಂದ ಬಾಲಕರಿಗೆ ಹಾಗೂ ಬಾಲಕಿಯರಿಗೆ ಪ್ರತ್ಯೇಕವಾಗಿ ದೈಹಿಕ ಸುರಕ್ಷತೆ, ಮಾನಸಿಕ ಆರೋಗ್ಯ ಹಾಗೂ ಸಾಮಾಜಿಕ ಜಾಲತಾಣಗಳ

ಬಳಿಕ ಎಚ್ಚರಿಕೆ ಕುರಿತು ಇಂಚರ ಫೌಂಡೇಶನ್‌ನ ಸೌಮ್ಯ ಹಾಗೂ ಶ್ವೇತಾ ಮಾಹಿತಿ ನೀಡಿದರು.

**ಜಿಲ್ಲಾ ಮಟ್ಟದ ಗಣಿತ-ವಿಜ್ಞಾನ ಮೇಳ: 30.8.25**

ವಿದ್ಯಾಭಾರತಿ ದ.ಕ ಜಿಲ್ಲಾ ಮಟ್ಟದ ಗಣಿತ ಮಾದರಿ ಪ್ರದರ್ಶನದಲ್ಲಿ ಸಮ ಬಹುಭುಜಾಕೃತಿ ಗುಣ ಧರ್ಮಗಳ ಮೇಲೆ ಆಧಾರಿತ ಪ್ರದರ್ಶನ ಎಂಬ ವಿಷಯದಲ್ಲಿ 6ನೇ ಸ್ಕಂದತೇಜ, ಸಂಸ್ಕೃತಿ ಜ್ಞಾನ ರಸಪ್ರಶ್ನೆಯಲ್ಲಿ 7ನೇ ಪ್ರಾಪ್ತಿ, ಅಪ್ರಮೇಯ ತೋಳ್ಪಾಡಿ, 6ನೇ ಭೂಮಿಕ ಪ್ರಥಮ ಸ್ಥಾನ ಪಡೆದು ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಗಣಿತ ಮಾದರಿ ಪ್ರದರ್ಶನದಲ್ಲಿ ಸೃಜನಾತ್ಮಕ ಮಾದರಿ ಎಂಬ ವಿಷಯದಲ್ಲಿ 6ನೇ ಅನ್ವೇಷ್ ಪ್ರಭು ದ್ವಿತೀಯ ಸ್ಥಾನ ಪಡೆದುಕೊಂಡಿದ್ದಾರೆ.

**ಚಟುವಟಿಕೆಯಾಧಾರಿತ ಶಿಕ್ಷಣ : 1.8.2025**

ಗೋಶಾಲೆ ಭೇಟಿ ಹಾಗೂ ಪರಿಸರ ವೀಕ್ಷಣೆ

2ನೇ ತರಗತಿಯ ಪರಿಸರ ಅಧ್ಯಯನ ಪಾಠಕ್ಕೆ ಸಂಬಂಧಿಸಿದಂತೆ ಹಣ್ಣುಗಳ ಪರಿಚಯ, ಔಷಧೀಯ ಸಸ್ಯಗಳ ಪರಿಚಯಗಳ ಜೊತೆಗೆ ಪರಿಸರ ವೀಕ್ಷಣೆ ಮಾಡಿ ವಿದ್ಯಾಕೇಂದ್ರದ ವಸುಧಾರಾ ಗೋಶಾಲೆಗೆ ಭೇಟಿ ನೀಡಿದರು.

**4.8.2025 – ಮನೆಯ ಮಾದರಿ ತಯಾರಿ**

2ನೇ ತರಗತಿಯ ಇಂಗ್ಲೀಷ್ ಪಾಠಕ್ಕೆ ಸಂಬಂಧಿಸಿದಂತೆ ಮನೆಯ ಮಾದರಿಗಳನ್ನು ತಂದು ವೇದವ್ಯಾಸದಲ್ಲಿ ಪ್ರದರ್ಶಿಸಿದರು.

**11.8.2025–ಗಿಡದ ಬೆಳವಣಿಗೆ ಪ್ರಾತ್ಯಕ್ಷಿಕೆ**

1ನೇ ತರಗತಿಯ ವಿದ್ಯಾರ್ಥಿಗಳಿಗೆ ನಮ್ಮ ಸುತ್ತಲ ಸಸ್ಯಗಳ ಪಾಠಕ್ಕೆ ಸಂಬಂಧಿಸಿದಂತೆ ತೆಂಗಿನ ಗೆರಟೆಯಲ್ಲಿ ಬೀಜ ಬಿತ್ತನೆ ಮಾಡುವುದರ ಮೂಲಕ ಪಠ್ಯ ಚಟುವಟಿಕೆಯನ್ನು ಮಕ್ಕಳಿಂದ ಮಾಡಿಸಲಾಯಿತು. ಅಂತೆಯೇ ಅದು ಮೊಳಕೆಯೊಡೆದು ಗಿಡವಾಗುವುದನ್ನು ನಂತರದ ದಿನಗಳಲ್ಲಿ ಪರಿಶೀಲಿಸಿದರು.

## ಪ್ರೌಢಶಾಲೆ

**ಶ್ರದ್ಧಾಂಜಲಿ 01.08.2025**

ಮಧುಕರ ಸಭಾಂಗಣದಲ್ಲಿ ರಾ.ಸೇ.ಸಮಿತಿಯ 4ನೇ ಪ್ರಮುಖ ಸಂಚಾಲಿಕಾ ಆಗಿದ್ದ ವಂದನೀಯ ಪ್ರಮೀಳಾ ತಾಯಿ ಮೇಢೆ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

**ಶಾಲಾ ಮಟ್ಟದ ಜ್ಞಾನ ವಿಜ್ಞಾನ ಮೇಳ**

ಈ ಸ್ಪರ್ಧೆಗಳನ್ನು 04.08.2025 ರಂದು ನಡೆಸಿ ಜಿಲ್ಲಾ ಮಟ್ಟದ ಸ್ಪರ್ಧೆಗೆ ಆಯ್ಕೆ ಮಾಡಲಾಯಿತು.

**ಸಂಸ್ಕೃತ ಸಪ್ತಾಹ ಉದ್ಘಾಟನೆ 7.8.25**

ಮಧುಕರ ಸಭಾಂಗಣದಲ್ಲಿ ಶ್ರೀ ಕೃಷ್ಣನ ಭಾವಚಿತ್ರ ಮತ್ತು ಭಗವದ್ಗೀತೆಗೆ ಪುಷ್ಪಾರ್ಚನೆ ಮಾಡುವ ಮೂಲಕ ಸಂಸ್ಕೃತ ಸಪ್ತಾಹದ ಉದ್ಘಾಟನೆ ನಡೆಯಿತು. ಶ್ರೀ ಗಣೇಶ್ (ಎಸ್.ವಿ.ಎಸ್ ಪ.ಪೂ. ವಿದ್ಯಾಲಯದ ಸಂಸ್ಕೃತ ಶಿಕ್ಷಕರು) ವಿದ್ಯಾರ್ಥಿಗಳಿಗೆ ಸಂಸ್ಕೃತದ ಮಹತ್ವ ತಿಳಿಸಿದರು. ಸಂಸ್ಕೃತ ಶಿಕ್ಷಕರು ಶ್ರೀ ಜಯರಾಮ ಪ್ರಸ್ತಾವನೆ ಮಾಡಿದರು. ಧಾತ್ರಿ, ಸ್ಫೂರ್ತಿ ಸಂಸ್ಕೃತ ಗೀತೆ ಹಾಡಿದರು. ಭಗವದ್ಗೀತೆಯ ಶ್ಲೋಕಗಳನ್ನು ವೈದೇಹಿ ಮತ್ತು ಚಿನ್ಮಯಿ ಹೇಳಿದರು. ಮುಖ್ಯೋಪಾಧ್ಯಾಯರು ಉಪಸ್ಥಿತರಿದ್ದರು.

ಸಂಸ್ಕೃತ ನಾಟಕ, ಸಂಸ್ಕೃತ ವಸ್ತುಪ್ರದರ್ಶಿನಿ, 'ಶಬರಿ' ರೂಪಕ, ಸಂಸ್ಕೃತ ಗೀತ ಗಾಯನ ಕಂಠಪಾಠ ಸ್ಪರ್ಧೆ, ಗೀತ ಶ್ಲೋಕ ರಾಮಾಯಣ, ಗೀತಶ್ಲೋಕ, ಮಹಾಭಾರತ, ಗೀತಶ್ಲೋಕ, ಭಗವದ್ಗೀತೆ ಪಠನ ಹೀಗೆ ದಿವಸ ವಿವಿಧ ರೀತಿಯ ಕಾರ್ಯಕ್ರಮಗಳನ್ನು ನಡೆಸಲಾಯಿತು. ಸಂಸ್ಕೃತ ಸಪ್ತಾಹದ ಪ್ರಯುಕ್ತ ನಡೆದಂತಹ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.

**ಸಂಸ್ಕೃತೋತ್ಸವ ಮತ್ತು ರಕ್ಷಾಬಂಧನ ಕಾರ್ಯಕ್ರಮ. 09.8.2025**

ಸಂಸ್ಕೃತೋತ್ಸವ ಮತ್ತು ರಕ್ಷಾಬಂಧನ ಕಾರ್ಯಕ್ರಮದಲ್ಲಿ ತಿರುಪತಿ ವೆಂಕಟ್ರಮಣ ದೇವಸ್ಥಾನದ ಭೂತಪೂರ್ವ ಮುಖ್ಯ ಅರ್ಚಕರಾದ ಶ್ರೀ ಶಂಕರನಾರಾಯಣ ಶರ್ಮ ಸಂಸ್ಕೃತದ ಮಹತ್ವವನ್ನು ತಿಳಿಸಿದರು. ಸಹಸಂಚಾಲಕರಾದ ಶ್ರೀ ರಮೇಶ್ ಎನ್ ರಕ್ಷಾಬಂಧನದ ಮಹತ್ವ ತಿಳಿಸಿದರು. ಶ್ರೀಮತಿ ಗೀತಾ ತಾಳ್ತಾಜೆ(ಪುತ್ತೂರು ತಾ. ರಾ.ಸೇ.ಸಮಿತಿಯ ಕಾರ್ಯವಾಹಿಕಾ) ಬಾಳ್ಳಿಲ ಗ್ರಾಮ ಪಂಚಾಯತ್‌ನ ಅಧ್ಯಕ್ಷರಾದ ಶ್ರೀ ಚಂದ್ರಶೇಖರ, ಉಪಾಧ್ಯಕ್ಷರಾದ ಶ್ರೀಮತಿ ರಂಜಿನಿ ಎಸ್, ಹಾಗೂ ಸದಸ್ಯರಾದ ಶ್ರೀಮತಿ ಮಲ್ಲಿಕಾ ಎನ್.ಎಂ, ಶ್ರೀಮತಿ ಚೈತ್ರ, ಶ್ರೀ ನಿತಿನ್ ಕುಮಾರ್, ಭ. ಹಿರಣ್ಮಯಿ, ಶ್ರೀ ವಿಠಲ, ಶ್ರಿಮತಿ ಎನ್.ಶೋಭಾ ಕುಮಾರಿ, ಶ್ರೀ ಲತೀಶ್ ಕೆ. ಶ್ರೀಮತಿ ಮಮತಾ ಶ್ರೀ ರಾಜೀವ, ಶ್ರೀಮತಿ ಹರಿಣಾಕ್ಷಿ ಉಪಸ್ಥಿತರಿದ್ದರು

**ರಾಜ್ಯಮಟ್ಟಕ್ಕೆ ಆಯ್ಕೆ 09.8.2025**

ವಿದ್ಯಾಭಾರತಿ ಕರ್ನಾಟಕ ದ.ಕ ಇದರ ವತಿಯಿಂದ ಶಕ್ತಿ ವಿದ್ಯಾಸಂಸ್ಥೆ ಮಂಗಳೂರು ಇಲ್ಲಿ ನಡೆದ ಜಿಲ್ಲಾಮಟ್ಟದ ಈಜು ಸ್ಪರ್ಧೆಯಲ್ಲಿ 17ರ ವಯೋಮಾನದ ಬಾಲಕಿಯರ ವಿಭಾಗದಲ್ಲಿ 10ನೇ ತರಗತಿಯ ವಿದ್ಯಾರ್ಥಿನಿ ಅನರ್ಘ್ಯ ಎ ಆರ್ 3 ಚಿನ್ನದ ಪದಕಗಳನ್ನು ಪಡೆದು ರಾಜ್ಯಮಟ್ಟಕ್ಕೆ ಆಯ್ಕೆಯಾಗಿರುತ್ತಾಳೆ.

**ಮಾತೃಭಾರತಿ ಮತ್ತು**

**ಪೋಷಕರ ಸಮಿತಿ ರಚನೆ 11.8.25**

ಪ್ರೌಢಶಾಲಾ ವಿಭಾಗದ ಮಾತೃಭಾರತಿ ಮತ್ತು ಪೋಷಕರ ಸಮಿತಿಯ ಸಭೆಯು ಮಧುಕರ ಸಭಾಂಗಣದಲ್ಲಿ ನಡೆಯಿತು. ಸಹ ಸಂಚಾಲಕರಾದ ಶ್ರೀ ರಮೇಶ್ ಎನ್, ಪ್ರೌಢಶಾಲೆಯ ಶಿಕ್ಷಣ ಪರಿವೀಕ್ಷಕರಾದ ಶ್ರೀಮತಿ ಲಕ್ಷ್ಮಿ ರಘುರಾಜ್, ಮತ್ತು ಶ್ರೀಮತಿ ಸುಧಾ ಸೂರ್ಯನಾರಾಯಣ ಭಟ್, ಉಪಸ್ಥಿತರಿದ್ದರು. ಸಭೆಯಲ್ಲಿ ಪದಾಧಿಕಾರಿಗಳ ರಚನೆ ನಡೆಯಿತು.

**ಘೋಷ್ ವಾದನ 15.8.2025**

ಘೋಷ್ ತಂಡವು ಸ್ವಾತಂತ್ರ್ಯ ದಿನಾಚರಣೆಯ ನಿಮಿತ್ತ ಬಂಟ್ವಾಳದ ತಾಲೂಕು ಕಚೇರಿಯ ಮುಂಭಾಗದಲ್ಲಿ ಘೋಷ್ ವಾದನದ ಮೂಲಕ ಪಥಸಂಚಲನದಲ್ಲಿ ಭಾಗವಹಿಸಿದರು.

**ಶಾಲಾ ಮಟ್ಟದ ಸಂಸ್ಕೃತಿ ಜ್ಞಾನ ಸ್ಪರ್ಧೆಗಳು 19.08.2025 ನಡೆಯಿತು.**

**ಶ್ರೀರಾಮ ಭಜನಾ ಮಂದಿರಕ್ಕೆ ಭೇಟಿ 20.8.25**

ಪ್ರೌಢಶಾಲಾ ವಿದ್ಯಾರ್ಥಿಗಳು ಸರಸ್ವತಿ ವಂದನಾ ಹಾಗೂ ಸಾಮೂಹಿಕ ಶಾರೀರಿಕವನ್ನು ಶ್ರೀರಾಮ ಮಂದಿರ ಕಲ್ಲಡ್ಕದಲ್ಲಿ ಮಾಡಿದರು. ಶಾ.ಶಿ.ಶಿಕ್ಷಕರಾದ ಶ್ರೀ ಪುರುಷೋತ್ತಮ ನಿರ್ವಸಿದರು.

**ಸ್ಕೇಟಿಂಗ್ ತೃತೀಯ ಸ್ಥಾನ 21.8.2025**

ಸಾ.ಶಿ.ಇ. ನಡೆಸಿದ ಜಿಲ್ಲಾಮಟ್ಟದ ಸ್ಕೇಟಿಂಗ್ ಸ್ಪರ್ಧೆಯು ಅಶೋಕ ನಗರ ಸ್ಕೇಟ್ ಸಿಟಿ ಕ್ರೀಡಾಂಗಣದಲ್ಲಿ ನಡೆಯಿತು. 17ರ ವಯೋಮಾನದ ಬಾಲಕರ ವಿಭಾಗದಲ್ಲಿ ಪವನ್ 3000k.m ತೃತೀಯ ಸ್ಥಾನವನ್ನು ಪಡೆದಿರುತ್ತಾನೆ.

**ಈಜು ಸ್ಪರ್ಧೆಯಲ್ಲಿ ರಾಷ್ಟ್ರಮಟ್ಟಕ್ಕೆ ಆಯ್ಕೆ 22.8.25**



ವಿದ್ಯಾಭಾರತಿ ಕರ್ನಾಟಕ ರಾಷ್ಟ್ರೋತ್ಥಾನ ವಿದ್ಯಾಕೇಂದ್ರ ಬನಶಂಕರಿ ಬೆಂಗಳೂರು. ಇಲ್ಲಿ ನಡೆದ ರಾಜ್ಯ ಮಟ್ಟದ ಈಜು ಸ್ಪರ್ಧೆಯಲ್ಲಿ 17ರ ವಯೋಮಾನದ ಬಾಲಕಿಯರ ವಿಭಾಗದಲ್ಲಿ ಪ್ರೌಢಶಾಲೆಯ 10ನೇ ತರಗತಿಯ ವಿದ್ಯಾರ್ಥಿನಿ ಅನರ್ಘ್ಯ ಎ ಆರ್ 1 ಚಿನ್ನದ ಪದಕ, 1 ಬೆಳ್ಳಿಯ ಪದಕ ಮತ್ತು 1 ಕಂಚಿನ ಪದಕವನ್ನುಗಳಿಸಿ ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾಗಿರುತ್ತಾಳೆ.

**ಅತಿಥಿಗಳ ಭೇಟಿ 21.08.2025**

ಸರಸ್ವತಿ ವಂದನದಲ್ಲಿ ಶ್ರೀ ಎನ್. ಆರ್. ದಾಮೋದರ ಶರ್ಮಾ (ಖ್ಯಾತ ವಾಗ್ಮಿಗಳು) ಹಾಗೂ ಡಾ। ಪ್ರಭಾಕರ್ ಭಟ್ ಉಪಸ್ಥಿತರಿದ್ದರು.

**ಸಂಸ್ಕೃತಿ ಜ್ಞಾನ ಮೇಳ ಮತ್ತು ಜ್ಞಾನ ವಿಜ್ಞಾನ ಮೇಳದ ಬಹುಮಾನ ವಿತರಣೆ. 23.08.2025**

ಬಾಲ ವರ್ಗ ಹಾಗೂ ಕಿಶೋರ ವರ್ಗಗಳ ಗಣಿತ-ವಿಜ್ಞಾನ ಮೇಳ, ಸಂಸ್ಕೃತಿ ಮಹೋತ್ಸವದ ಶಾಲಾ ಮಟ್ಟದ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನವನ್ನು ವಿತರಿಸಲಾಯಿತು.

**ATL ಲ್ಯಾಬ್‌ನಲ್ಲಿ ಕಾರ್ಯಾಗಾರ 26.08.2025**

ಅಟಲ್ ಟಿಂಕರಿಂಗ್ ಲ್ಯಾಬ್‌ನಲ್ಲಿ ಶ್ರೀ ರಂಜಿತ್ ಹಿರಿಯ ವಿದ್ಯಾರ್ಥಿ 8ನೇ ತರಗತಿಯ ವಿದ್ಯಾರ್ಥಿಗಳಿಗೆ ಕಾರ್ಯಾಗಾರ ನಡೆಸಿದರು. ರೋಹಿಣಿ ಮಾತಾಜಿ ಉಪಸ್ಥಿತರಿದ್ದರು.

## ಇಂಗ್ಲೀಷ್ ಮೀಡಿಯಂ ಸ್ಕೂಲ್

**ಬ್ಯಾಂಕ್ ವ್ಯವಹಾರಗಳ ಮಾಹಿತಿ 06.08.2025**

ಶ್ರೀರಾಮ ಇಂಗ್ಲೀಷ್ ಮೀಡಿಯಂ ಶಾಲೆಯ ವಿದ್ಯಾರ್ಥಿಗಳಿಗೆ ಬ್ಯಾಂಕ್ ವ್ಯವಹಾರಗಳ ಬಗ್ಗೆ ಶ್ರೀರಾಮ ಸೌ.ಸ.ಸಂಘ.ನಿ. ಇದರ ಮ್ಯಾನೇಜರ್ ಶ್ರೀಮತಿ ಸಂಗೀತರವರು ಮಾಹಿತಿ ನೀಡಿದರು. ಬಳಿಕ ವಿದ್ಯಾರ್ಥಿಗಳು ಬ್ಯಾಂಕಿಗೆ ತೆರಳಿ ಪ್ರಾಯೋಗಿಕ ಜ್ಞಾನವನ್ನು ಪಡೆದುಕೊಂಡರು.

**ಸಂಸ್ಕೃತ ಸಪ್ತಾಹ ಉದ್ಘಾಟನೆ 07.08.2025**

ಶಾಲೆಯಲ್ಲಿ ಸಂಸ್ಕೃತ ಸಪ್ತಾಹದ ವಿದ್ಯಾರ್ಥಿಗಳಿಗೆ ಸಂಸ್ಕೃತ ವಸ್ತು ಪ್ರದರ್ಶನ, "ವಯಂ ರಾಷ್ಟ್ರೇ ಜಾಗ್ರಯಾಮ" ಎಂಬ ಕಿರು ಚಿತ್ರ ಪ್ರದರ್ಶನವನ್ನು ಏರ್ಪಡಿಸಲಾಯಿತು.

**ಯೋಗಾಸನ: ರಾಜ್ಯಮಟ್ಟಕ್ಕೆ ಆಯ್ಕೆ 23.08.2025**

ವಿದ್ಯಾಭಾರತಿ ದ.ಕನ್ನಡ ಜಿಲ್ಲೆ ಇದರ ವತಿಯಿಂದ ಪ್ರೇರಣಾ ಅನುದಾನಿತ ಶಾಲೆ ಕಡಲಕೆರೆ ಇಲ್ಲಿ ನಡೆದ ಜಿಲ್ಲಾ ಮಟ್ಟದ ಯೋಗಾಸನ ಸ್ಪರ್ಧೆಯಲ್ಲಿ ಇಂಗ್ಲೀಷ್ ಮೀಡಿಯಂ ಶಾಲೆಯ ಬ್ರಾಹ್ಮಿ 10ನೇ ತರಗತಿ ಟ್ರೆಡಿಶನಲ್ ಯೋಗಾಸನ ಸ್ಪರ್ಧೆಯಲ್ಲಿ ವಿಜೇತರಾಗಿ ರಾಜ್ಯಮಟ್ಟದ ಯೋಗಾಸನ ಸ್ಪರ್ಧೆಗೆ ಆಯ್ಕೆಯಾಗಿರುತ್ತಾಳೆ

**ಜಿಲ್ಲಾಮಟ್ಟದ ಜ್ಞಾನವಿಜ್ಞಾನ ಮೇಳ 30.8.2025**

ವಿಜ್ಞಾನ ಪ್ರಯೋಗ ಸ್ಪರ್ಧೆ–ಚಿನ್ಮಯ್ ದ್ವಿತೀಯ, ನೀರಿನ ನಿರ್ವಹಣೆ ಮಾದರಿ–ಅಭಿಜ್ಞಾ ತೃತೀಯ, ವೇದಗಣಿತ ರಸಪ್ರಶ್ನೆ–ಭವಿಷ್, ಸುಪ್ರೀತ್ ಸೂರ್ಯ, ಧನ್ವಿತ ತೃತೀಯ, ವಿದ್ಯುತ್ ಕಾಂತೀಯ ಪರಿಣಾಮ ಮಾದರಿ–ವಿನಾಯಕ ಭಾರದ್ವಾಜ್ ತೃತೀಯ ಸ್ಥಾನ ಪಡೆದಿದ್ದಾರೆ.

## ಪದವಿಪೂರ್ವ

**ವಿಜ್ಞಾನ ಕಾರ್ಯಾಗಾರ 01.08.2025**

ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳಿಗೆ ಕಂಪೆನಿ ಸೆಕ್ರಟರಿ ಕೋರ್ಸ್‌ನ ಬಗ್ಗೆ ಶ್ರೀ ಸಂತೋಷ್ ಪ್ರಭು ಅಗತ್ಯ ಮಾಹಿತಿಗಳನ್ನು ವಿದ್ಯಾರ್ಥಿಗಳಿಗೆ ನೀಡಿದರು. ಕಾರ್ಯಕ್ರಮದಲ್ಲಿ ಶ್ರೀ ಶಂಕರ್ ಮಂಗಳೂರು ಶ್ರೀ ದಿನೇಶ್ ಉಪಪ್ರಾಂಶುಪಾಲರು, ಉಪಸ್ಥಿತರಿದ್ದರು.

**ವಾಣಿಜ್ಯ ಕಾರ್ಯಾಗಾರ 01.08.25**

ವಿಜ್ಞಾನ ವಿಭಾಗದ ವಿದ್ಯಾರ್ಥಿಗಳಿಗೆ ವೇದ ಗಣಿತದ ಬಗ್ಗೆ ಸಾಂದೀಪನಿ ವಿದ್ಯಾಸಂಸ್ಥೆ ನರಿಮೊಗರು, ಪುತ್ತೂರಿನ ಸಂಸ್ಕೃತ ಶಿಕ್ಷಕರಾದ ಕುಶಲ ಇವರು ತರಬೇತಿಯನ್ನು ನೀಡಿದರು. ಗಣಿತಶಾಸ್ತ್ರ ಉಪನ್ಯಾಸಕರಾದ ಶ್ರೀಮತಿ ಜಯಲಕ್ಷ್ಮಿ, ಶ್ರೀಮತಿ ವಿದ್ಯಾಶ್ರೀ ಉಪಸ್ಥಿತರಿದ್ದರು.

**ಸಂಸ್ಕೃತ ಸಪ್ತಾಹ ಕಾರ್ಯಕ್ರಮ 05.08.25**

ಭಾರವಿ ಸಂಸ್ಕೃತ ಸಂಘದಿಂದ ನಡೆದ ಸಂಸ್ಕೃತ ಸಪ್ತಾಹ ಕಾರ್ಯಕ್ರಮದಲ್ಲಿ ಶ್ರೀ ತೇಜಸ್ ಪ್ರಬೋಧಿನಿ ಗುರುಕುಲ ಹರಿಹರಪುರ ಇವರು ಸಂಸ್ಕೃತ ಭಾಷೆಯ ಮಹತ್ವವನ್ನು ತಿಳಿಸಿದರು. ಪ್ರಾಂಶುಪಾಲರಾದ ಶ್ರೀ ವಸಂತ ಬಲ್ಲಾಳ ಉಪಸ್ಥಿತರಿದ್ದರು, ಸಂಸ್ಕೃತ ಸಂಘದ ನಿರ್ದೇಶಕರಾದ ಶ್ರೀ ಮಹೇಂದ್ರ ಮಂಜುನಾಥ್ ಸಂಯೋಜನೆ ಮಾಡಿದರು.

**ಗೋವುಗಳಿಗೆ ಮೇವು 05.08.2025**

ದ್ವಿತೀಯ ಕಲಾ ಮತ್ತು ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳು ವಸುಧಾರದ ಗೋವುಗಳಿಗೆ ಹುಲ್ಲು ಮತ್ತು ಹಿಂಡಿಯನ್ನು ನೀಡಿದರು.

**ಅಂತರ್ ಕಾಲೇಜು ನಾಟಕ ಸ್ಪರ್ಧೆ 6.08.2025**

ಒಡಿಯೂರಿನಲ್ಲಿ ನಡೆದ ಅಂತರ್ ಕಾಲೇಜು ನಾಟಕ ಸ್ಪರ್ಧೆಯಲ್ಲಿ ಪ್ರ.ವಿಜ್ಞಾನ ವಿಭಾಗದ ಆಶ್ರಯ್ ವಿಶೇಷ ಬಹುಮಾನು ಪಡೆದಿರುತ್ತಾರೆ.

**ಸಾಹಿತ್ಯ ಕಮ್ಮಟ ಕಾರ್ಯಕ್ರಮ 12.8.2025**

ವಿಂಶತಿ ಸಂಭ್ರಮಾಚರಣೆಯ ಪ್ರಯುಕ್ತ ನಡೆದ ಸಾಹಿತ್ಯ ಕಮ್ಮಟದಲ್ಲಿ ಶ್ರೀ ಭಾಸ್ಕರ ಅಡ್ವಳ ನಿವೃತ್ತ ಮುಖ್ಯೋಪಾಧ್ಯರು, ಮಕ್ಕಳ ಕಲಾ ಲೋಕ ಬಂ. ತಾಲೂಕಿನ ಗೌ.ಸಲಹೆಗಾರರು ಇವರು ಕಥೆಗಳನ್ನು ರಚಿಸುವ ಬಗ್ಗೆ ಮಾಹಿತಿಯನ್ನು ನೀಡಿದರು. ನಂತರ ವಿದ್ಯಾರ್ಥಿಗಳು ಬರೆದ ಕಥೆಗಳನ್ನು ಹೇಳಿಸಲಾಯಿತು. ಶ್ರೀ ರಮೇಶ್ ಎಂ ಬಾಯಾರು ರಾಜ್ಯ ಪ್ರಶಸ್ತಿ ಪುರಸ್ಕೃತರು ನಿವೃತ್ತ ಅಧ್ಯಾಪಕರು, ಮಕ್ಕಳ ಕಲಾ ಲೋಕ ಬಂ.ತಾಲೂಕು ಇದರ ಅಧ್ಯಕ್ಷರಾದ ಇವರು ಕವನ ರಚನೆಯ ಬಗ್ಗೆ ಮಾಹಿತಿಯನ್ನು ನೀಡಿದರು. ವಿದ್ಯಾರ್ಥಿಗಳು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

**ವೀರ ರಾಣಿ ಅಬ್ಬಕ್ಕ 500ನೇ ಜನ್ಮ ವರ್ಷಾಚರಣೆಯ ಕಾರ್ಯಕ್ರಮ 13.08.2025**

ವೀರರಾಣಿ ಅಬ್ಬಕ್ಕ 500ನೇ ಜನ್ಮ ವರ್ಷಾಚರಣೆಯಲ್ಲಿ ಅಧ್ಯಕ್ಷತೆಯನ್ನು ಆಡಳಿತ ಮಂಡಳಿ ಸದಸ್ಯರಾದ ಶ್ರೀ ನಾಗೇಶ್ ಕಲ್ಲಡ್ಕ ವಹಿಸಿದ್ದರು. ಶ್ರೀ ಲತೇಶ್ ಬಾಕ್ರಬೈಲ್ ಅವರು ರಾಣಿ ಅಬ್ಬಕ್ಕನ ಜೀವನ ಸಾಧನೆ ಹೋರಾಟಗಳನ್ನು ಸವಿವರವಾಗಿ ತಿಳಿಸಿದರು.

**ಮಾತೃಭಾರತಿ ಮತ್ತು ಶಿಕ್ಷಕ–ರಕ್ಷಕ ಸಂಘದ ಉದ್ಘಾಟನಾ ಕಾರ್ಯಕ್ರಮ 13.8.2025**

ಮಾತೃಭಾರತಿ ಮತ್ತು ಶಿಕ್ಷಕ–ರಕ್ಷಕ ಸಂಘದ ಉದ್ಘಾಟನಾ ಕಾರ್ಯಕ್ರಮದಲ್ಲಿ ಶ್ರೀ ಶಿವಗಿರಿ ಸತೀಶ್ ಭಟ್ ಮಾರ್ಗದರ್ಶನ ಮಾಡಿದರು. ಪ್ರಾಂಶುಪಾಲರಾದ ಶ್ರೀ ವಸಂತ್ ಬಲ್ಲಾಳ್ ಉಪಸ್ಥಿತರಿದ್ದರು. ಪೋಷಕರು ಕಾಲೇಜಿನ ಚಟುವಟಿಕೆಗಳ ಬಗ್ಗೆ ಚರ್ಚಿಸಿ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು.

**ವಿಜ್ಞಾನ ಮಾದರಿ, ಪ್ರಯೋಗ ಸ್ಪರ್ಧೆ 13.8.25**

ಭಾಸ್ಕರಾಚಾರ್ಯ ವಿಜ್ಞಾನ ಸಂಘದ ವತಿಯಿಂದ ನಡೆದ ಸ್ಪರ್ಧೆಗಳನ್ನು ಪ್ರೌಢಶಾಲಾ ಶಿಕ್ಷಕಿ ಶ್ರೀಮತಿ ವಿನುತಾ ಉದ್ಘಾಟಿಸಿದರು. ಹಾಗೂ ATL ಲ್ಯಾಬ್‌ನ ನಿರ್ವಾಹಕರು ಶ್ರೀಮತಿ ರೋಹಿಣಿ, ವಿಜ್ಞಾನ ಸಂಘದ ನಿರ್ದೇಶಕರಾದ ರೇಶ್ಮಾ ಮಾತಾಜಿ ಉಪಸ್ಥಿತರಿದ್ದರು.

**ಕೃಷ್ಣಾರ್ಪಣಂ ಸ್ಪರ್ಧೆ 14.08.2025**

ಭಾವನ ಸಾಂಸ್ಕೃತಿಕ ಸಂಘದ ವತಿಯಿಂದ ಶ್ರೀಕೃಷ್ಣ ಜನ್ಮಾಷ್ಟಮಿಯ ಪ್ರಯುಕ್ತ ನಡೆಸಿದ ಕೃಷ್ಣಾರ್ಪಣಂ ಸ್ಪರ್ಧೆಯಲ್ಲಿ 14 ವಿದ್ಯಾರ್ಥಿಗಳ ತಂಡವು ಭಾಗವಹಿಸಿತು. ತೀರ್ಪುಗಾರರಾಗಿ ಶ್ರೀ ಪದ್ಮನಾಭ ಪಿ. ಕೆ, ಶ್ರೀ ಅರುಣ್ ಪ್ರಸಾದ್, ಶ್ರೀ ನಿರಂಜನ್ ಗೋಖಲೆ ಇವರು ಸಹಕರಿಸಿದರು.

**ಕಾರ್ಯಾಗಾರ 21.08.2025**

ಭಾಸ್ಕರಾಚಾರ್ಯ ವಿಜ್ಞಾನ ಸಂಘದ ವತಿಯಿಂದ ಮಾನಸಿಕ ಆರೋಗ್ಯ ಮಾಹಿತಿಯನ್ನು ಶ್ರೀಮತಿ ಸೌಮ್ಯ, ಸಲಹೆಗಾರರು ಇಂಚರ ಫೌಂಡೇಶನ್ ಮಂಗಳೂರು ಹಾಗೂ ಸಂಯೋಜಕರಾದ ಕು. ಶ್ವೇತ ಕೆ, ಉದ್ಘಾಟಿಸಿದರು. ವಿಜ್ಞಾನ ಸಂಘದ ನಿರ್ದೇಶಕರಾದ ರೇಶ್ಮಾ ಉಪಸ್ಥಿತರಿದ್ದರು.

**ATL ಕಾರ್ಯಾಗಾರ ಆಗಸ್ಟ್ 22 , 2025**

ATL ಲ್ಯಾಬ್‌ನಲ್ಲಿ 8ನೇ ತರಗತಿ ವಿದ್ಯಾರ್ಥಿಗಳಿಗಾಗಿ Shell NXPlorer ಸಂಸ್ಥೆಯ ವತಿಯಿಂದ, ಸಂಸ್ಥೆಯ ಸಂಯೋಜಕಿಯಾದ ಶ್ರೀಮತಿ ಅನುರಾಧ ಇವರು ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿ "ಆಹಾರ, ನೀರು ಮತ್ತು ಶಕ್ತಿಯ ಸ್ಥಿರತೆ" ಎಂಬ ವಿಷಯದ ಕುರಿತು ಒಂದು ದಿನದ ಕಾರ್ಯಾಗಾರ ನಡೆಸಿಕೊಟ್ಟರು. ಶ್ರೀಮತಿ ರೋಹಿಣಿ ಶ್ರೀಮತಿ ಲೋಲಾಕ್ಷಿ ಮಾತಾಜಿ ಮತ್ತು ಗಾಯತ್ರಿ ಮಾತಾಜಿ ಸಹಕರಿಸಿದರು.

**ಯೋಗಾಸನ ಸ್ಪರ್ಧೆ ರಾಜ್ಯಮಟ್ಟಕ್ಕೆ ಆಯ್ಕೆ 23.8.25**

ವಿದ್ಯಾಭಾರತಿ ಕನಾಟಕ ದ.ಕ ಜಿಲ್ಲೆ ವತಿಯಿಂದ ಪ್ರೇರಣಾ ಅ.ಹಿ.ಪ್ರಾ. ಶಾಲೆ ಕಡಲಕೆರೆಯಲ್ಲಿ ನಡೆದ ಜಿಲ್ಲಾ ಮಟ್ಟದ ಯೋಗಾಸನ ಸ್ಪರ್ಧೆಯಲ್ಲಿ 19ರ ವಯೋಮಾನದ ಬಾಲಕಿಯರ ರಿದಮಿಕ್ ಯೋಗದಲ್ಲಿ ಗೀತಾಲಕ್ಷ್ಮಿ, ಅಥ್ಲೆಟಿಕ್ ಯೋಗದಲ್ಲಿ ಚಿಂತನ, ಬಾಲಕರ ಅಥ್ಲೆಟಿಕ್ ಯೋಗದಲ್ಲಿ ಭರತ್, ಶ್ರವಣ ರಿದಮಿಕ್ ಯೋಗದಲ್ಲಿ ಪ್ರಥಮ ಸ್ಥಾನ ಪಡೆದು ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

**ವಾಲಿಬಾಲ್ ಪಂದ್ಯಾಟ 23.8.25**

ಪ.ಪೂ.ಶಿಕ್ಷಣ ಇಲಾಖೆ & ಶ್ರೀ ರಾಮಚಂದ್ರ ಪ.ಪೂ ಕಾಲೇಜು ಪೆರ್ನೆ ನಡೆಸಿದ ವಾಲಿಬಾಲ್ ಪಂದ್ಯಾಟದಲ್ಲಿ ಬಾಲಕರ ತಂಡವು ಭಾಗವಹಿಸಿತು. ಇಬ್ಬರು ವಿದ್ಯಾರ್ಥಿಗಳು ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿರುತ್ತಾರೆ.

**ಜಿಲ್ಲಾ ಮಟ್ಟದ ಚೆಸ್ ಪಂದ್ಯಾಟ 25.8.2025**

ಶಾರದ ಪ.ಪೂ. ಕಾಲೇಜಿನಲ್ಲಿ ಪ.ಪೂ. ಶಿ. ಇಲಾಖೆ ನಡೆಸಿದ ಜಿಲ್ಲಾ ಮಟ್ಟದ ಚೆಸ್ ಪಂದ್ಯಾಟದಲ್ಲಿ ಬಾಲಕರ ತಂಡ ಭಾಗವಹಿಸಿರುತ್ತಾರೆ.

**ಜಿಲ್ಲಾಮಟ್ಟದ ಫುಟ್ಬಾಲ್ ಪಂದ್ಯಾಟ 26.8.25**

ಎಕ್ಸಲೆಂಟ್ ಪ.ಪೂರ್ವ ಕಾಲೇಜು ಮೂಡಬಿದ್ರೆಯಲ್ಲಿ ಪ.ಪೂ. ಶಿಕ್ಷಣ ಇಲಾಖೆ ನಡೆಸಿದ ಜಿಲ್ಲಾಮಟ್ಟದ ಫುಟ್ಬಾಲ್ ಶ್ರೀರಾಮ ಪ.ಪೂ. ಕಾಲೇಜಿನ ಆರು ವಿದ್ಯಾರ್ಥಿಗಳು ಭಾಗವಹಿಸಿರುತ್ತಾರೆ

**ಕಾರ್ಯಾಗಾರ 26.8.25**

ATLಲ್ಯಾಬ್‌ನಲ್ಲಿ ಶ್ರೀ ರಂಜಿತ್ ಹಿ.ವಿದ್ಯಾರ್ಥಿ 8ನೇ ತರಗತಿಯ ವಿದ್ಯಾರ್ಥಿಗಳಿಗೆ ಕಾರ್ಯಾಗಾರ ನಡೆಸಿದರು. ಶ್ರೀಮತಿ ರೋಹಿಣಿ ಮಾತಾಜಿ ಉಪಸ್ಥಿತರಿದ್ದರು.

**ಸಾಂಸ್ಕೃತಿಕ ಕಾರ್ಯಕ್ರಮ 27.8.25 &28.8.25**

ವಿಂಶತಿ ಕಾರ್ಯಕ್ರಮದ ನಿಮಿತ್ತ ಗಣೇಶ ಚತುರ್ಥಿಯ ಪ್ರಯುಕ್ತ ಪಾಣೆಮಂಗಳೂರು ಮತ್ತು ಕಂಬಳಬೆಟ್ಟುವಿನಲ್ಲಿ ಶ್ರೀರಾಮ ಪದವಿ ಪೂರ್ವ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮವು ನಡೆಸಲಾಯಿತು

**ಜಿಲ್ಲಾ ಮಟ್ಟದ ಗಣಿತ-ವಿಜ್ಞಾನ ಮೇಳ ಮತ್ತು ಸಂಸ್ಕೃತಿ ಮಹೋತ್ಸವ 30.08.2025** ವಿದ್ಯಾಭಾರತಿ ಜಿಲ್ಲಾ ಮಟ್ಟದ ಗಣಿತ-ವಿಜ್ಞಾನ ಮೇಳ ಮತ್ತು ಸಂಸ್ಕೃತಿ ಮಹೋತ್ಸವದಲ್ಲಿ ಸಂಸ್ಕೃತಿ ಜ್ಞಾನ ರಸಪ್ರಶ್ನೆಯಲ್ಲಿ ಗಗನ್, ಭೂಷಣ್, ಆರುಷ್, ವಿಜ್ಞಾನ ಮಾದರಿ ಪ್ರದರ್ಶನದಲ್ಲಿ ಯತೇಶ್, ವಿಜ್ಞಾನ ಸೃಜನಾತ್ಮಕ ಮಾದರಿಯಲ್ಲಿ ಆದಿತ್ಯ ಮಲ್ಯ ವಿಜ್ಞಾನ ಪ್ರಯೋಗದಲ್ಲಿ ಸಮೀಕ್ಷಾ, ವೇದಗಣಿತ ರಸಪ್ರಶ್ನೆಯಲ್ಲಿ ಅನುಶ್ರೀ, ಆಕಾಶ್, ಗೌತಮ್ ಭಾರಧ್ವಾಜ್, ಗಣಿತ ಮಾದರಿಯಲ್ಲಿ ಮನಾಲಿ ದೇವಸ್ಯ . ಗಣಿತ ಪತ್ರ ವಾಚನದಲ್ಲಿ ತೇಜ ಯನ್. ಪಿ ಆಚಾರ್ಯ ಪತ್ರ ವಾಚನದಲ್ಲಿ ಕೃಷ್ಣಕೃಪ ಮಾತಾಜಿ ಪ್ರಥಮ ಸ್ಥಾನ ಪಡೆದು ಪ್ರಾಂತ ಮಟ್ಟಕ್ಕೆ ಆಯ್ಕೆಯಾಗಿರುತ್ತಾರೆ. ಆಶು ಭಾಷಣ ಸ್ಪರ್ಧೆಯಲ್ಲಿ ಶಮನ್, ವಿಜ್ಞಾನ ಮಾದರಿಯಲ್ಲಿ ಬಿಂದು, ಗಣಿತ ಪ್ರಯೋಗದಲ್ಲಿ ಪ್ರಣಾಮ್, ವಿಜ್ಞಾನ ಮಾದರಿಯಲ್ಲಿ ದೀಕ್ಷಿತ್, ಶಿವ ಸಿಸೋಡಿಯಾ. ವಿಜ್ಞಾನ ಪ್ರಯೋಗದಲ್ಲಿ ಪ್ರತೀಕ್ಷ ದ್ವಿತೀಯ ಸ್ಥಾನ ಪಡೆದಿರುತ್ತಾರೆ. ವಿಜ್ಞಾನ ಮಾದರಿ ಸೆನ್ಸಾರ್ ಆಧಾರಿತ ಸ್ಪರ್ಧೆಯಲ್ಲಿ - ಸಜಿತ್, ದಿವ್ಯೇಶ್ ವಿಜ್ಞಾನ ಪತ್ರ ವಾಚನದಲ್ಲಿ ನಿನಾದ್, ವಿಜ್ಞಾನ ಮಾದರಿಯಲ್ಲಿ ಅನುಷಾ ಜಾನಪದ ನೃತ್ಯದಲ್ಲಿ ಪಂಚಮಿ ಮತ್ತು ತಂಡ ವಿಜ್ಞಾನ ರಸಪ್ರಶ್ನೆಯಲ್ಲಿ ಆಶ್ರಿತ್, ಪ್ರಜಶ್ವನಿ, ರಶ್ಮಿತ ತೃತೀಯ ಸ್ಥಾನ ಪಡೆದಿರುತ್ತಾರೆ

**ವಿಷಯವಾರು ಕಾರ್ಯಾಗಾರಗಳು 19.8.2025**

ಎಕ್ಸೆಲ್ ಪಿಯು ಕಾಲೇಜು ಬೆಳ್ತಂಗಡಿ ಇಲ್ಲಿ ನಡೆದ ಜೀವಶಾಸ್ತ್ರ ಕಾರ್ಯಾಗಾರದಲ್ಲಿ ಜೀವಶಾಸ್ತ್ರ ಉಪನ್ಯಾಸಕಿ ಶ್ರೀಮತಿ ಶೈಲಿನಿ, ದಿ:20.08.2025 ರಂದು ಎಕ್ಸೆಲೆಂಟ್ ಪಿ.ಯು ಕಾಲೇಜು ಮೂಡಬಿದ್ರೆಯಲ್ಲಿ ನಡೆದ ಸಂಸ್ಕೃತ ಉಪನ್ಯಾಸಕರ ಕಾರ್ಯಾಗಾರದಲ್ಲಿ ಶ್ರೀ ಮಹೇಂದ್ರ ಮಂಜುನಾಥ್ ಭಟ್, ದಿ:29.8.2025ರಂದು ಸಂತ ಫಿಲೋಮಿನ ಪ.ಪೂ ಕಾಲೇಜಿನಲ್ಲಿ ನಡೆದ ಸಮಾಜಶಾಸ್ತ್ರ ಕಾರ್ಯಾಗಾರದಲ್ಲಿ ಸಮಾಜಶಾಸ್ತ್ರ ಉಪನ್ಯಾಸಕಿ ಶ್ರೀಮತಿ ದೀಪಿಕಾ ಎನ್ ಭಾಗವಹಿಸಿರುತ್ತಾರೆ.

## ಪದವಿ

**ಕಾರ್ಯಾಗಾರದಲ್ಲಿ ಭಾಗಿ 4.08.2025**

ಗಣಕಶಾಸ್ತ್ರ ಉಪನ್ಯಾಸಕಿಯರಾದ ಪ್ರಜ್ಞಾ, ವರ್ಷಾ ಹಾಗೂ ತೇಜಸ್ವಿನಿ ಇವರು ಮಂಗಳೂರು SDM ಕಾಲೇಜಿನಲ್ಲಿ ನಡೆದ SEP ಪಠ್ಯಕ್ರಮದ ಕುರಿತಾದ ಕಾರ್ಯಾಗಾರದಲ್ಲಿ ಭಾಗವಹಿಸಿದರು.

**"ಸಂಸ್ಕೃತ ಭೋಜನ" 08.07.2025**

ಮಧ್ಯಾಹ್ನದ ಭೋಜನದ ಸಂದರ್ಭದಲ್ಲಿ ಸಂಸ್ಕೃತದಲ್ಲಿಯೇ ವ್ಯವಹರಿಸಲಾಯಿತು. ಊಟದಲ್ಲಿದ್ದ ವಿವಿಧ ಪದಾರ್ಥಗಳನ್ನು ಸಂಸ್ಕೃತದಲ್ಲಿಯೇ ಗುರುತಿಸುವ ಮೂಲಕ ವಿದ್ಯಾರ್ಥಿಗಳು ಸಂಸ್ಕೃತದ ಕೆಲವು ಪದಗಳ ಪರಿಚಯವನ್ನು ಮಾಡಿಕೊಂಡರು.

**ಕಾರ್ಯಾಗಾರದಲ್ಲಿ ಭಾಗಿ 09.08.2025**

ಸ.ಪ್ರ.ದರ್ಜೆ ಮಹಿಳಾ ಕಾಲೇಜು, ಬಲ್ಮಠ ಇಲ್ಲಿ ಅರ್ಥಶಾಸ್ತ್ರ ವಿಷಯದ 3rd ಸೆಮಿಸ್ಟರ್'ನ SEP ಹೊಸ ಪಠ್ಯ ಕ್ರಮದ ಕುರಿತು ನಡೆದ ಕಾರ್ಯಾಗಾರದಲ್ಲಿ ಶ್ರೀಮತಿ ಸಂಧ್ಯಾ ಮಾತಾಜಿ ಭಾಗವಹಿಸಿರುತ್ತಾರೆ.

**ಪ್ರತಿಜ್ಞಾ ಸ್ವೀಕಾರ 13.08.2025**

NSS ವಿದ್ಯಾರ್ಥಿಗಳು "ನಶಾ ಮುಕ್ತ ಭಾರತ ಅಭಿಯಾನ"ದ ಕುರಿತು ಪ್ರತಿಜ್ಞಾ ಸ್ವೀಕಾರ ನಡೆಸಿದರು.

**ವಿದ್ಯಾರ್ಥಿ ಸಂಘದ ಚುನಾವಣೆ 16.08.2025**

ವಿದ್ಯಾರ್ಥಿ ಸಂಘದ ಮತದಾನದಲ್ಲಿ ಅಂತಿಮ ಬಿಕಾಂ ವಿದ್ಯಾರ್ಥಿನಿ ಕು. ಭೂಮಿಕಾ ನಾಗರಾಜು ಅವಿರೋಧವಾಗಿ ಅಧ್ಯಕ್ಷ ಸ್ಥಾನಕ್ಕೆ ಆಯ್ಕೆಗೊಂಡಿದ್ದಾರೆ. ಕಾರ್ಯದರ್ಶಿ ಸ್ಥಾನಕ್ಕೆ ಅಂತಿಮ ಬಿಎ ವಿದ್ಯಾರ್ಥಿನಿ ಚೈತನ್ಯ ಹಾಗೂ ಅಂತಿಮ ಬಿಕಾಂ ವಿದ್ಯಾರ್ಥಿನಿ ಕು. ಧನುಶ್ರೀ ಸ್ಪರ್ಧಿಸಿದ್ದು ಚೈತನ್ಯ ಇವರು 96 ಮತಗಳನ್ನು ಪಡೆದು ಕೇವಲ 2 ಮತಗಳ ಅಂತರದಲ್ಲಿ ವಿಜಯಿಯಾಗಿ ಕಾರ್ಯದರ್ಶಿ ಸ್ಥಾನಕ್ಕೆ ಆಯ್ಕೆಯಾಗಿದ್ದಾರೆ. ಸಹ ಕಾರ್ಯದರ್ಶಿ ಸ್ಥಾನಕ್ಕೆ ದ್ವಿತೀಯ ಬಿಎ ವಿದ್ಯಾರ್ಥಿನಿ ಕು. ನಿಧಿ ಹಾಗೂ ದ್ವಿತೀಯ ಬಿಕಾಂ ವಿದ್ಯಾರ್ಥಿ ಯಜ್ಞೇಶ್ ಅವಿರೋಧವಾಗಿ ಆಯ್ಕೆಗೊಂಡಿದ್ದಾರೆ.

**ಸಿಎ ತರಬೇತಿ ಕಾರ್ಯಾಗಾರ 16.8.2025**

ವಾಣಿಜ್ಯ ಘಟಕ ಮತ್ತು ಆಂತರಿಕ ಗುಣಮಟ್ಟ ಭರವಸಾ ಕೋಶ (IQAC) ಇವರ ಸಂಯುಕ್ತ ಆಶ್ರಯದಲ್ಲಿ ಬಿಕಾಂ ವಿದ್ಯಾರ್ಥಿಗಳಿಗೆ ಚಾರ್ಟರ್ಡ್ ಅಕೌಂಟೆನ್ಸಿ (CA) ಪರಿಚಯದ ಬಗ್ಗೆ ಕಾರ್ಯಾಗಾರ ಹಿರಿಯ ವಿದ್ಯಾರ್ಥಿ ಶ್ರೀ ಯಕ್ಷಿತ್ ನಡೆಸಿಕೊಟ್ಟರು.

**ಕಾರ್ಯಾಗಾರದಲ್ಲಿ ಭಾಗಿ 19.08.2025**

ಶ್ರೀಗೋಕರ್ಣನಾಥೇಶ್ವರ ಕಾಲೇಜು, ಗಾಂಧಿ ನಗರ, ಮಂಗಳೂರು ಇಲ್ಲಿ ಇತಿಹಾಸ ವಿಷಯದ 3rd ಸೆಮಿಸ್ಟರ್'ನ SEP ಹೊಸ ಪಠ್ಯಕ್ರಮದ ಕುರಿತು ಒಂದು ದಿನದ ಕಾರ್ಯಾಗಾರ ನಡೆಯಿತು. ಈ ಕಾರ್ಯಾಗಾರದಲ್ಲಿ ಇತಿಹಾಸ ಉಪನ್ಯಾಸಕಿ ಶ್ರೀಮತಿ ಆಶಾಲತಾ ಮಾತಾಜಿ ಇವರು ಭಾಗವಹಿಸಿರುತ್ತಾರೆ.

**2025 ಜೂನ್-ಜುಲೈನಲ್ಲಿ ನಡೆದ ನಾಲ್ಕನೇ ಸೆಮಿಸ್ಟರ್ ಪರೀಕ್ಷೆಯ ಫಲಿತಾಂಶ.**

ಮಂ. ವಿಶ್ವವಿದ್ಯಾನಿಲಯ 4ನೇ ಸೆಮಿಸ್ಟರ್ ಪರೀಕ್ಷೆಯ ಫಲಿತಾಂಶಗಳನ್ನು ಪ್ರಕಟಿಸಿದ್ದು ಶ್ರೀರಾಮ ಪದವಿ ವಿಭಾಗದ ವಾಣಿಜ್ಯ ವಿಭಾಗದಲ್ಲಿ 88.8% ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ, ಬಿಸಿಎ ವಿಭಾಗದಲ್ಲಿ 88.8% ಮಂದಿ ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ, ಹಾಗೂ ಬಿಎ ವಿಭಾಗದಲ್ಲಿ 83% ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ .ವಾಣಿಜ್ಯ ವಿಭಾಗದ ವಿದ್ಯಾರ್ಥಿನಿ ಹರ್ಷಿತ 90% ಅಂಕ, ಬಿಸಿಎ ವಿಭಾಗದ ವಿದ್ಯಾರ್ಥಿನಿ ದಿವ್ಯ ಲಕ್ಷ್ಮಿ 94.75% ಅಂಕ, ಬಿಎ ವಿಭಾಗದ ವಿದ್ಯಾರ್ಥಿ ಜಿತೇಂದ್ರ 87% ಅಂಕಗಳನ್ನು ಗಳಿಸಿ ತರಗತಿಯಲ್ಲಿ ಅಗ್ರಸ್ಥಾನವನ್ನು ಪಡೆದಿದ್ದಾರೆ.

**ಐಟಿ ಕ್ಲಬ್‌ನ ಉದ್ಘಾಟನೆ 22.8.25**

ಶ್ರೀರಾಮ ಪ್ರಥಮದರ್ಜೆ ಮಹಾವಿದ್ಯಾಲಯದ ಐಟಿ ಕ್ಲಬ್‌ನ ಉದ್ಘಾಟನಾ ಕಾರ್ಯಕ್ರಮ ಹಾಗೂ "Emerging technologies" ಎಂಬ ವಿಷಯದ ಬಗ್ಗೆ ಕಾರ್ಯಾಗಾರ ನಡೆಯಿತು. ವಿವೇಕಾನಂದ ಇಂಜಿನಿಯರಿಂಗ್ ಕಾಲೇಜಿನ ಡಾಟಾ ಸೈನ್ಸ್ ವಿಭಾಗದ ಪ್ರಾಧ್ಯಾಪಕ ಶ್ರೀ ಚೈತನ್ಯ ಡಿ. ಇವರು ಕಾರ್ಯಾಗಾರ ನಡೆಸಿಕೊಟ್ಟರು.

**FDP ಕಾರ್ಯಕ್ರಮ 23.08.2025**

IQAC ವತಿಯಿಂದ ಆಯೋಜಿಸಿಲಾಗಿದ್ದ FDP ಕಾರ್ಯಕ್ರಮದ ಬಗ್ಗೆ ಗಣಕಶಾಸ್ತ್ರ ವಿಭಾಗದ ಉಪನ್ಯಾಸಕಿ ಶ್ರೀಮತಿ ತೃಪ್ತಿ ಶೆಟ್ಟಿ ಇವರು ಮಾಹಿತಿ ನೀಡಿದರು. ಪ್ರಾಂಶುಪಾಲ ಶ್ರೀ ಕೃಷ್ಣಪ್ರಸಾದ್ ಹಾಗೂ IQAC ಸಂಯೋಜಕಿ ಶ್ರೀಮತಿ ಜಯಲಕ್ಷ್ಮಿ ಉಪಸ್ಥಿತರಿದ್ದರು.

**NSS ಉದ್ಘಾಟನೆ 30.08.2025**

**NSS** 2025-26ನೇ ವಾರ್ಷಿಕ ಚಟುವಟಿಕೆಗಳ ಉದ್ಘಾಟನೆಯನ್ನು ಗೋವಿಂದದಾಸ ಪದವಿ ಕಾಲೇಜಿನ ಉಪನ್ಯಾಸಕರಾದ ಶ್ರೀಮತಿ ಅಕ್ಷತಾ ಉದ್ಘಾಟಿಸಿದರು. ಉಪಪ್ರಾಂಶುಪಾಲರಾದ ಶ್ರೀ ಯತಿರಾಜ್ ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು. ವೇದಿಕೆಯಲ್ಲಿ **NSS** ಯೋಜನಾಧಿಕಾರಿ ಶ್ರೀಮತಿ ವಿನುತಲಕ್ಷ್ಮಿ ಹಾಗೂ ಸಹಯೋಜನಾಧಿಕಾರಿ ದೀಕ್ಷಿತ್ ಉಪಸ್ಥಿತರಿದ್ದರು,



ಸಾ.ಶಿ.ಇಲಾಖೆ(12.8.25)–ಕಲ್ಲಡ್ಕ ವಲಯ ಮಟ್ಟ – ಪ್ರಾಥಮಿಕ ವಿಭಾಗ ಖೋ ಖೋ ಪಂದ್ಯಾಟದಲ್ಲಿ ಬಾಲಕರ ತಂಡವು ದ್ವಿತೀಯ ಸ್ಥಾನ.




ಈಜು ರಾಷ್ಟ್ರಮಟ್ಟಕ್ಕೆ ಆಯ್ಕೆ: 6ನೇ ತರಗತಿಯ ಅನನ್ಯ 200ಮೀ. ಬಟರ್‌ಫ್ಲೈ, 100ಮೀ ಬ್ಯಾಕ್ ಸ್ಟ್ರೋಕ್



6ನೇ ತರಗತಿ ಸ್ಕಂದ ತೇಜ ಗಣಿತ ಮಾದರಿಯಲ್ಲಿ, 7ನೇ ಪ್ರಾಪ್ತಿ, ಅಪ್ರಮೇಯ ತೋಳ್ಪಾಡಿ, 6ನೇ ಭೂಮಿಕ ಸಂಸ್ಕೃತಿ ಜ್ಞಾನ ರಸಪ್ರಶ್ನೆಯಲ್ಲಿ ರಾಜ್ಯ ಮಟ್ಟಕ್ಕೆ ಆಯ್ಕೆ




ಸಾ.ಶಿ.ಇಲಾಖೆ, ದ.ಕ ಜಿಲ್ಲಾ ಮಟ್ಟದ ಸ್ಕೇಟಿಂಗ್ ಸ್ಪರ್ಧೆಯಲ್ಲಿ 17ರ ವಯೋಮಾನ ಪ್ರೌಢಶಾಲೆಯ ಪವನಾಕ್ಷ ರಾಜ್ಯ ಮಟ್ಟಕ್ಕೆ ಆಯ್ಕೆ



ಸಾ.ಶಿ.ಇಲಾಖೆ(12.8.25)–ಕಲ್ಲಡ್ಕ ವಲಯಮಟ್ಟ –ಪ್ರೌಢಶಾಲಾ ವಿಭಾಗ ಖೋ–ಖೋ ಪಂದ್ಯಾಟದಲ್ಲಿ ಪ್ರೌಢಶಾಲೆಯ 14ರ ವಯೋಮಾನದ ಬಾಲಕಿಯರು ದ್ವಿತೀಯ ಸ್ಥಾನ.



ಸಾ.ಶಿ.ಇಲಾಖೆ (13.08.2025)ಕಲ್ಲಡ್ಕ ವಲಯ ಮಟ್ಟದ ಖೋ–ಖೋ ಪಂದ್ಯಾಟದಲ್ಲಿ ಪ್ರೌಢಶಾಲೆಯ 17ರ ವಯೋಮಾನದ ಬಾಲಕಿಯರು ತಾಲೂಕು ಮಟ್ಟಕ್ಕೆ ಆಯ್ಕೆ



ಸಾ.ಶಿ.ಇಲಾಖೆ (13.08.2025)ಕಲ್ಲಡ್ಕ ವಲಯ ಮಟ್ಟದ ಖೋ–ಖೋ ಪಂದ್ಯಾಟದಲ್ಲಿ ಪ್ರೌಢಶಾಲೆಯ 17ರ ವಯೋಮಾನದ ಬಾಲಕರು ತಾಲೂಕು ಮಟ್ಟಕ್ಕೆ ಆಯ್ಕೆ



ಸಾ.ಶಿ.ಇಲಾಖೆ, (21.08.2025)ಕಲ್ಲಡ್ಕ ವಲಯ ಮಟ್ಟದ ಕಬಡ್ಡಿ ಪಂದ್ಯಾಟದಲ್ಲಿ ಪ್ರೌಢಶಾಲೆಯ 17ರ ವಯೋಮಾನದ ಬಾಲಕಿಯರು ತಾಲೂಕು ಮಟ್ಟಕ್ಕೆ ಆಯ್ಕೆ. ಉತ್ತಮ ಹಿಡಿತಗಾರ್ತಿ ಪ್ರೇಕ್ಷ, ಉತ್ತಮ ಅಲ್‌ರೌಂಡರ್ ಪ್ರಶಸ್ತಿಯನ್ನು ದಿಶಾಲಿ ಪಡೆದುಕೊಂಡಿರುತ್ತಾಳೆ.



ಸಾ.ಶಿ.ಇಲಾಖೆ, (21.08.2025)ಕಲ್ಲಡ್ಕ ವಲಯ ಮಟ್ಟದ ಕಬಡ್ಡಿ ಪಂದ್ಯಾಟದಲ್ಲಿ ಪ್ರೌಢಶಾಲೆಯ 14ರ ವಯೋಮಾನದ ಬಾಲಕಿಯರು ತಾಲೂಕು ಮಟ್ಟಕ್ಕೆ ಆಯ್ಕೆ. ಉತ್ತಮ ಹಿಡಿತಗಾರ್ತಿ ಪಲ್ಲವಿ, ಉತ್ತಮ ಅಲ್‌ರೌಂಡರ್ ಪ್ರಶಸ್ತಿಯನ್ನು ಸಿಂಚನ ಪಡೆದುಕೊಂಡಿರುತ್ತಾಳೆ.



ಸಾ.ಶಿ.ಇಲಾಖೆ, (21.08.2025)ಕಲ್ಲಡ್ಕ ವಲಯ ಮಟ್ಟದ ಕಬಡ್ಡಿ ಪಂದ್ಯಾಟದಲ್ಲಿ ಪ್ರೌಢಶಾಲೆಯ 14ರ ವಯೋಮಾನದ ಬಾಲಕರು ತಾಲೂಕು ಮಟ್ಟಕ್ಕೆ ಆಯ್ಕೆ. ಉತ್ತಮ ಹಿಡಿತಗಾರ್ತಿ ಪಲ್ಲವಿ, ಭುವನ್ ಉತ್ತಮ ರೈಡರ್ ಪ್ರಶಸ್ತಿಯನ್ನು ಪಡೆದುಕೊಂಡಿರುತ್ತಾನೆ



ಸಾ.ಶಿ.ಇಲಾಖೆ, (21.08.2025)ಕಲ್ಲಡ್ಕ ವಲಯ ಮಟ್ಟದ ಕಬಡ್ಡಿ ಪಂದ್ಯಾಟದಲ್ಲಿ ಇಂಗ್ಲೀಷ್ ಮೀಡಿಯಂ ಶಾಲೆಯ 17ರ ವಯೋಮಾನದ ಬಾಲಕರು ತಾಲೂಕು ಮಟ್ಟಕ್ಕೆ ಆಯ್ಕೆ. .



ಜಿಲ್ಲಾ ಮಟ್ಟದ ಖೋಖೋ ಪಂದ್ಯಾಟ 5.8.25 ಶ್ರೀ ದೇವಿ ವಿದ್ಯಾಕೇಂದ್ರ ಪುಣಚದಲ್ಲಿ ನಡೆದ ಜಿಲ್ಲಾ ಮಟ್ಟದ ಖೋ ಖೋ ಪಂದ್ಯಾಟದಲ್ಲಿ 19ರ ವಯೋಮಾನದ (ಪ.ಪೂ) ಬಾಲಕ, ಬಾಲಕಿಯರ ದ್ವಿತೀಯ ಸ್ಥಾನ ಪಡೆದಿರುತಾರೆ.



ಪ.ಪೂ. ಶಿಕ್ಷಣ ಇಲಾಖೆ ತಾಲೂಕು ಮಟ್ಟದ ಫುಟ್ಬಾಲ್ ಪಂದ್ಯಾಟ (9.08.25) ತುಂಬೆ ಪ.ಪೂ. ಕಾಲೇಜ್ ತುಂಬೆ ಇಲ್ಲಿ ನಡೆದ ತಾ.ಮಟ್ಟದ ಫುಟ್ಬಾಲ್ ಪಂದ್ಯಾಟದಲ್ಲಿ ಶ್ರೀರಾಮ ಪ.ಪೂ ಬಾಲಕರ ತಂಡ ದ್ವಿತೀಯ ಸ್ಥಾನ ಪಡೆದು, ಆರು ವಿದ್ಯಾರ್ಥಿಗಳು ಜಿಲ್ಲಾಮಟ್ಟಕ್ಕೆ ಆಯ್ಕೆಯಾಗಿರುತ್ತಾರೆ.

## ಪೋಷಕರ ಸಭೆ



ಪ್ರಾಥಮಿಕ ಶಾಲೆ – 12.08.2025



ಪ್ರೌಢಶಾಲೆ(ಕನ್ನಡ) –19.08.2025



ಇಂಗ್ಲೀಷ್ ಮೀಡಿಯಂ ಸ್ಕೂಲ್– 11.08.2025

## ಕೇಂದ್ರ ಸರ್ಕಾರದ ಅನುದಾನಕ್ಕೆ ಆಯ್ಕೆಯಾದ ರಾಷ್ಟ್ರಮಟ್ಟದ ಇನೋವೇಶನ್ ಮಾದರಿ



ಮಿನಿಸ್ಟ್ರಿ ಆಫ್ ಎಜುಕೇಶನ್, AICTE ಹಾಗೂ PM Shri ಇವರ ಜಂಟಿ ಆಶ್ರಯದಲ್ಲಿ ನಡೆದ ಸ್ಕೂಲ್ ಇನ್ನೋವೇಶನ್ ಕಾಂಟೆಸ್ಟ್ 2024–25ನೇ ಸಾಲಿನಲ್ಲಿ 6 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿ, 1.5 ಲಕ್ಷಕ್ಕೂ ಹೆಚ್ಚು ಆವಿಷ್ಕಾರ ಮಾದರಿಗಳನ್ನು ಸಲ್ಲಿಸಿದ್ದರು. ಅನೇಕ ಪ್ರತಿಭೆಗಳ ನಡುವೆ ಶ್ರೇಷ್ಠವಾದ 27 ಮಾದರಿಗಳು ವಿಜೇತರಾಗಿ ಮೂರು ಹಂತಗಳ ಸಂದರ್ಶನದ ನಂತರ ಕೇಂದ್ರ ಸರ್ಕಾರದ ಅನುದಾನಕ್ಕೆ ಆಯ್ಕೆಯಾದ ಶ್ರೀರಾಮ ಪ್ರೌಢಶಾಲಾ ವಿದ್ಯಾರ್ಥಿಗಳಾದ ಜಗನ್ ಮತ್ತು ಶಿವಾಜಿ ಶೆಟ್ಟಿ ಇವರಿಗೆ ಪೋಷಕರ ಸಭೆಯಲ್ಲಿ ಸನ್ಮಾನ ಮಾಡಲಾಯಿತು.




**ಐತಿಹಾಸಿಕ ಸ್ಥಳಗಳಿಗೆ ಬೇಟಿ 30.08.2025:** ದ್ವಿ. ಕಲಾ ಮತ್ತು ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳು ಮೂಡಬಿದ್ರೆ ಸಾವಿರ ಕಂಬ ಬಸದಿ, ಕಾರ್ಕಳ ಚತುರ್ಮುಖ ಬಸದಿ, ಗೋಮಟೇಶ್ವರ ಮೂರ್ತಿ, ಮಣಿಪಾಲ ಜೀವವಿಜ್ಞಾನ ವಸ್ತು ಸಂಗ್ರಹಾಲಯ, ಉಡುಪಿ ಶ್ರೀಕೃಷ್ಣ ಮಠ, ಬಪ್ಪನಾಡು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನ ಇತ್ಯಾದಿ ಐತಿಹಾಸಿಕ ಸ್ಥಳಗಳಿಗೆ ಬೇಟಿ ನೀಡಿ ಕ್ಷೇತ್ರದ ಮಾಹಿತಿ ಪಡೆದರು.

## ವಿದ್ಯಾಭಾರತಿ ಜಿಲ್ಲಾ ಮಟ್ಟದ ಗಣಿತ ವಿಜ್ಞಾನ ಮೇಳ 30.08.2025




ಶ್ರೀರಾಮ ಇಂಗ್ಲೀಷ್ ಮೀಡಿಯಂ ಶಾಲೆಯಲ್ಲಿ ವಿದ್ಯಾಭಾರತಿ ದ.ಕ ಜಿಲ್ಲಾಮಟ್ಟದ ಗಣಿತ ವಿಜ್ಞಾನಮೇಳ ನಡೆಯಿತು. ಡಾ॥ ಪ್ರಭಾಕರ್ ಭಟ್ ಕಲ್ಲಡ್ಕ ರವರು ದೀಪ ಪ್ರಜ್ವಲನೆ ಮಾಡಿ ಶುಭ ಹಾರೈಸಿದರು. ಕೈಗಾ ಅಣು ಸ್ಥಾವರ ಕಾರವಾರ, ಇಲ್ಲಿನ ನಿವೃತ್ತ ಅಧಿಕಾರಿ ಶ್ರೀ ದಿವಾಕರ ಪಡೀಲ್, ಅಮ್ಟೂರು, ಶ್ರೀ ಬಿ. ನಾರಾಯಣ ಸೋಮಯಾಜಿ, ಶ್ರೀ ವಸಂತ ಮಾಧವ, ವಿದ್ಯಾಭಾರತಿ ದ.ಕನ್ನಡ ಜಿಲ್ಲೆಯ ಜಿಲ್ಲಾಧ್ಯಕ್ಷರಾದ ಶ್ರೀ ಲೋಕಯ್ಯ. ಡಿ. ಕಾರ್ಯದರ್ಶಿ ಶ್ರೀ ರಮೇಶ್. ಕೆ., ಶ್ರೀ ಮಹೇಶ್ವರ ಭಟ್‌ರವರು ಉಪಸ್ಥಿತರಿದ್ದರು.

## ಮಂಥನ ಕಾರ್ಯಕ್ರಮ 23.8.2025




ಜಾಗತಿಕ ಆರ್ಥಿಕ ಪರಿದೃಶ್ಯ ಭಾರತದ ಸ್ಥಾನ ನಿಲುವು ಎಂಬ ವಿಷಯದ ಬಗ್ಗೆ ಮಧುಕರ ಸಭಾಭವನದಲ್ಲಿ ಮಂಥನ ಕಾರ್ಯಕ್ರಮವನ್ನು ಶ್ರೀ ವಿಶ್ವೇಶ್ವರ ಭಟ್ ಬಂಗಾರಡ್ಕ ಪ್ರಗತಿ ಪರ ಕೃಷಿಕರು ರಾಜಕೀಯ ಹಾಗೂ ಆರ್ಥಿಕ ವಿಶ್ಲೇಷಕರು, ವಿವೇಕಾನಂದ ಪಾಲಿಟೆಕ್ನಿಕ್ ಕಾಲೇಜು ಪುತ್ತೂರು ಇದರ ಸಂಚಾಲಕರು, ಕಾರ್ಯಕ್ರಮವನ್ನು ನಡೆಸಿಕೊಟ್ಟರು.

## ಸಾಂಸ್ಕೃತಿಕ ಕಾರ್ಯಕ್ರಮ



ದಿನಾಂಕ 23.8.2025 ರಂದು ಭಾವನ ಸಾಂಸ್ಕೃತಿಕ ಸಂಘದ ವತಿಯಿಂದ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮವು ನಡೆಯಿತು.

**ಸ್ವಾತಂತ್ರ್ಯ ದಿನಾಚರಣೆ 15.8.2025:** ಶ್ರೀರಾಮ ವಿದ್ಯಾಕೇಂದ್ರ ಕಲ್ಲಡ್ಕದಲ್ಲಿ 79ನೇ ಸ್ವಾತಂತ್ರ್ಯ ದಿನಾಚರಣೆ ಆಚರಿಸಲಾಯಿತು. ಪ್ರೊ. ಬಾಲಕೃಷ್ಣ ಕಲ್ಲೂರಾಯ (ಮಂಗಳೂರು ವಿ.ವಿ ನಿವೃತ್ತ ಪ್ರಾಧ್ಯಾಪಕರು) ಧ್ವಜಾರೋಹಣ ಮಾಡಿದರು.



ಶುಭಕೋರುವ :

**ಶ್ರೀರಾಮ ಸೌಹಾರ್ದ ಸಹಕಾರಿ ನಿಯಮಿತ**

ಪ್ರಧಾನ ಕಚೇರಿ: ಹನುಮಾನ್ ನಗರ ಕಲ್ಲಡ್ಕ ಬಂಟ್ವಾಳ ತಾಲೂಕು 574222 ದೂ: 08255 275173, 275373

ಶಾಖೆ : ಶ್ರೀರಾಮ ವಾಣಿಜ್ಯ ಸಂಕೀರ್ಣ ರಾಮನಗರ ಕಲ್ಲಡ್ಕ

ಕಲ್ಲಡ್ಕ ಶ್ರೀರಾಮ ವಾಣಿಜ್ಯ ಸಂಕೀರ್ಣದ ರಾಮ ನಗರ ಶಾಖೆಯಲ್ಲಿ E-Stamping ಛಾಪಾ ಕಾಗದ ಸೌಲಭ್ಯವಿದೆ

ಸಾಲ ಸೌಲಭ್ಯಗಳು

| | |
|---|---|
| ಚಿನ್ನಾಭರಣ ಸಾಲ | – 11% |
| ಜಾಮೀನು ಸಾಲ | – 16.5% |
| ಅಡವು ಸಾಲ | – 13.5% |
| ವಾಹನ ಸಾಲ | – 12% |
| ಗೃಹ ನಿರ್ಮಾಣ ಸಾಲ | – 11.5% |

ಠೇವಣಿ ಮೇಲೆ ಆಕರ್ಷಕ ಬಡ್ಡಿ ದರಗಳು

| | |
|---|---|
| 91ದಿನಗಳವರೆಗೆ | – 7% |
| 92ರಿಂದ 181 ದಿನಗಳು | – 7.5% |
| 182 ರಿಂದ 364 ದಿನಗಳು | – 8.5% |
| 1 ವರ್ಷ ಮತ್ತು ಮೇಲ್ಪಟ್ಟು | – 9.5% |

ಸೌಲಭ್ಯ

ಆವರ್ತನ ಠೇವಣಿ (R.D)
ಸಂಚಯ ಠೇವಣಿ (S.D)
ನಿರಂತರ ಠೇವಣಿ (ಪಿಗ್ಮಿ)

ಹಿರಿಯ ನಾಗರಿಕರಿಗೆ ಮಾಜಿ ಯೋಧರಿಗೆ ಮತ್ತು ವಿಧವೆಯರಿಗೆ 0.5% ಬಡ್ಡಿ ಹೆಚ್ಚಿಗೆ ನೀಡಲಾಗುವುದು.

Postal Regn No. PTR/136/2025-27 Licensed to Post without pre-payment License No: SK/WPP/PTR/117/2025-27

ಸರಯೂ

Vol. : 12 Issue : 4 Rs. 10/-

KARKAN/2014/62363
Posted at Kalladka P.O. on 10th and 15th of Every month

SRI RAMA VIDYAKENDRA TRUST (R.) Hanuman Nagar, Kalladka, Bantwal Tq., Dakshina Kannada, Karnataka 574 222
Website : www.shriramakalladka.in, www.srvk.org E-mail : info@srvk.org

BOOK POST

ಸವಿಧೇ,

Sarayu Kannada Monthly Edited and Published and Printed by B. Narayana Somayaji on behalf of Sri Rama Vidyakendra Trust, Hanuman Nagara, Kalladka, Bantwal Tq, Dakshina Kannada - 574 222. Phone : 9449728763. Printed at Digantha Mudrana Ltd. Mangaluru 575008, Bantwal Tq., Dakshina Kannada, Karnataka. Registration No. : KARKAN/2014/62363